ಕೊರವಂಜಿ



Koravanji

ಸೆಪ್ಟೆಂಬರ್

೧೯೬೧

★

ಸಂಪಾದಕರು

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ರಾಮಿ

ಶ್ರೀ॥ ಅ. ರಾ. ಸೇ

ಶ್ರೀ॥ ಪಾ.ಟಿ.

ಶ್ರೀ॥ ಕೇಫ

ಶ್ರೀ॥ ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ
[illegible]


ಇಂದೇ ನೋಡಿರಿ
ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲಿ ಈಗ
ಯಶಸ್ವಿಯಾಗಿ
ಪ್ರದರ್ಶನವಾಗುತ್ತಿದೆ.
ವಿಜಯಾ ರವರ
ಜಗದೇಕವೀರನ ಕಥೆ
ಕನ್ನಡ • ತೆಲುಗು
ನಿರ್ದೇಶಕ .. ಕೆ. ವಿ. ರೆಡ್ಡಿ, B.Sc (HONS)
ವಿಜಯಾ ಪಿಕ್ಚರ್ಸ್ ಸರ್ಕ್ಯೂಟ್ ರಿಲೀಸ್

——ಕಟಕ —

ಕೊರವಂಜಿ

ಸಂಪುಟ ೨೦ ಸೆಪ್ಟಂಬರ್ ೧೯೬೧ ಸಂಚಿಕೆ ೬

★ ಕುಹಕಿಡಿಗಳು ★

ಕ್ರಿಕೆಟ್ ಆಟದಲ್ಲಿ ಒಂದಾಗುತ್ತಲೊಂದು ಮೂರು ವಿಕೆಟ್ ತೆಗೆದುಕೊಂಡರೆ, ಹ್ಯಾಟ್ ಟ್ರಿಕ್ ಅಂತ ಎಲ್ರೂ ಹೊಗಳ್ತಾರಂತೆ.

— ನಮ್ಮಲ್ಲಿ ಉಪವಾಸಕ್ಕೆ ಹ್ಯಾಟ್ ಟ್ರಿಕ್ !

* * * *

ಸಿಂಹವೊಂದನ್ನು ಮೋಟಾರು ಕಾರಿನಲ್ಲಿ ಕೂರಿಸಿ, ರಸ್ತೆಯಲ್ಲಿ ಬಿಟ್ಟಿದ್ದ ಅಂತ ಅಮೆರಿಕಾದ ಸಿಂಹದ ಆಟಗಾರನಿಗೆ ಶಿಕ್ಷೆ ವಿಧಿಸಿದರಂತೆ.

— ಸಿಂಹಕ್ಕಿಂತ ಕ್ರೂರಿಯಾದ ಹೆಂಡತೀನ ಕಾರಿನಲ್ಲಿ ಕೂರಿಸಿಕೊಂಡು ಹೋದರೆ ಆ ಊರಲ್ಲಿ ಶಿಕ್ಷೆಯನ್ನು ವಿಧಿಸುವುದಿಲ್ಲವಂತೆ.

— ಏನು ತಪ್ಪು ! ಕೂರಿಸಿಕೊಂಡು ಹೋಗೋದೇ ಶಿಕ್ಷೆ! ಅಲ್ಲವೇ !

* * * *

'ಕೈಲಿದ್ದ ಬೆಣ್ಣೇನ ಎಸೆದುಬಿಟ್ಟು, ತುಪ್ಪಕ್ಕೆ ಅತ್ತರೂ' ಅಂತ ಗಾದೆ ಇದೆ.

— ಭಾವೈಕ್ಯ ಮಾಡುತ್ತಿದ್ದ, ಪುರಾತನ ದೈವೀಯತೆಯನ್ನು ದೂರಕ್ಕೆಸೆದು ನಾವೆಲ್ಲ ಭಾವಂದಿರಾಗೋಣ ಅಂತ ಈಗ ಅತ್ತ ಹಾಗೆ !

* * * *

ನೈಲಾನ್ ಒಳ ಉಡುಪನ್ನು ಧರಿಸಿ, ೨೦ ಮೀಟರ್ ದೂರ ನಡೆದ ಸ್ತ್ರೀಯರಲ್ಲಿ ೬೦೦ ವೋಲ್ಟ್ ವಿದ್ಯುಚ್ಛಕ್ತಿ ಉತ್ಪನ್ನವಾಗುತ್ತಂತೆ!

ಇದೇನು ಮಹಾ! ಕೇವಲ ಟಿಷ್ಯೂ ಉಡುಪು ಧರಿಸಿ ಸ್ತ್ರೀ ಒಂದು ಹೆಜ್ಜೆ ಹಾಕಿದಾಗ ನಮಗೆಲ್ಲಾ ಷಾಕ್ ಹೊಡೆದುಬಿಟ್ಟಿತು.

ನಾಗರ ಪಂಚಮಿ ದಿವಸ ಅಭ್ಯರ್ಥಿಗಳೆಲ್ಲರೂ ಚುನಾವಣಾ ಅರ್ಜಿಗಳನು ಮಂಡಳದ ಕಚೇರಿಗೆ ಕಳಿಸಿದರು.

—ಆದರೂಕೂಡ, ಅವರ ಹಬ್ಬದ ದಿನವೇ ಅರ್ಜಿ ಕಳಿಸಿದರು, ಅಂತ ಹೇಳ ಬಹುದೇ.

* * * *

ಫ್ರೆಂಚ್ ಸುಗಂಧ ವ್ಯಾಪಾರಿಗಳು ಅಂಕಿ ಅಂಶಗಳಿಂದ ಕಂಡುಹಿಡಿದುದು ಏನಂತ ಗೊತ್ತೆ? "ಇಂಗ್ಲೆಂಡಿನಲ್ಲಿ ಹೆಂಗಸರಿಗಿಂತ ಅತಿ ಹೆಚ್ಚಾಗಿ ಗಂಡಸರು ಸುಗಂಧ ದ್ರವ್ಯಗಳನ್ನು ಉಪಯೋಗಿಸ್ತಾರೆ" ಅಂತ.

—ನಮ್ಮೂರಿನಲ್ಲಿ ಒಂದು ತನಿಖೆ ಮಾಡಿದ್ದರೆ ಗೊತ್ತಾಗ್ತಿತ್ತು. ದುರ್ನಾಥಾನ ಮುಳುಗಿಸುಕ್ಕೆ ಅಂತ ಜನನಾಯಕರು ಉಪಯೋಗಿಸ್ತಾರಲ್ಲ ಸುಗಂದ ದ್ರವಗಳು. ಅವುಗಳ ಪ್ರಮಾಣ ನಮ್ಮೂರಿನಲ್ಲೇ ಲೋಕದ ಎಲ್ಲ ಕಡೆಗಿಂತ ಹೆಚ್ಚು ಅಂತ.

* * * *

ಪ್ರವಾಹ ಪೀಡಿತರ ಸಹಾಯಕ್ಕಾಗಿ ಧನ ಸಂಗ್ರಹ ಮಾಡಿದ ಚಲಚ್ಚಿತ್ರ ತಾರೆ ಯರಲ್ಲಿ ಚಿಕ್ಕ ಪುಟ್ಟ ತಾರೆಯರು, ಒಬ್ಬಿಬ್ಬರು ಹೀಗೆ ಸೆರಗೊಡ್ಡಿ ಭಿಕ್ಷೆ ಬೇಡಿದರೆ, ಸಂಬಳಕ್ಕಿಂತ ಹೆಚ್ಚು ಸಂಪಾದನೆಯಾಗುತ್ತೆ ಅಂತ ಗೊಣಗಿದರೆಂಬುದು ಶುದ್ಧ ಸುಳ್ಳು !

* * * *

ಚಲಚ್ಚಿತ್ರ ತಾರೆಯರು ಪಾದಯಾತ್ರೆ ಮೆರವಣಿಗೆಯನ್ನು ಮೋಟಾರಿನಲ್ಲಿ ಮಾಡ ಹೊರಟಾಗ, ಸಂಚಾರ ವ್ಯವಸ್ಥೆ ಮಾಡಲು ಸಿದ್ಧರಾದ ಸಾವಿರಾರು ಜನ ಪೋಲೀಸಿನವರು ತಂತಮ್ಮ ಆ ದಿನದ ಸಂಪಾದನೆಯನ್ನು ಕೊಟ್ಟಿದ್ದರೆ ಚೆನ್ನಾಗಿರು ತಿತ್ತು ಎಂದೊಬ್ಬರು ಬರೆದಿದ್ದಾರೆ.

—ಹಾಗಂದರೆ?

* * * *

ನಾಗಾಲ್ಯಾಂಡಿನ ಪರವಾಗಿ ಫೈಜೋ, ಡಿ ಎಂ. ಕೆ. ಯವರು, ಮಾಜಿಯಾದ ಮಂತ್ರಿಗಳು ಹಲವರು, ಮಾಸ್ಟರ್ ತಾರಾಸಿಂಗರಿಗೆ ಅಭಿವಂದನೆ ಕಳಿಸಿದ್ದಾರೆಂಬುದು ಖಚಿತವಾಗಿಲ್ಲ—

* * * *

ಕಾಶ್ಮೀರದ ವಿಧಾನ ಸಭಾಧ್ಯಕ್ಷರ ಮನೆಯಲ್ಲಿ ೧೨ ಅಡಿ ದಾಸರ ಹಾವು ಸಿಕ್ಕಿತಂತೆ. ಹಿಂದೆ ನಾಗರ ಹಾವೊಂದು ಸಿಕ್ಕಿತ್ತಂತೆ.

—ಕೆಲಸ ಮುಗಿಸಿಕೊಂಡು, ಮನೇಗೆ ಬಂದರೂ ಇವುಗಳ ಕಾಟ ತಪ್ಪಲಿಲ್ಲ ವಲ್ಲಪ್ಪಾ ಅಂತ ಅವರು ಶೋಕಿಸುತ್ತಾ ಇದ್ದಾರಂತೆ.

——:o:——

ಇದು ಕೇಳಿದ್ದಿರಾ ?

ಚಕ್ರವರ್ತಿ ಮಹೇಂದ್ರ ನೂರು ಯುದ್ಧಗಳಲ್ಲಿ ಹತ್ತಾರು ಸಾವಿರ ಜನರನ್ನು ಎರಡೂ ಕಡೆ ಕೊಲೆಮಾಡಿಸಿ, ತನ್ನ ರಾಜ್ಯವನ್ನು ದೊಡ್ಡದು ಮಾಡಿಕೊಂಡಿದ್ದ ಒಂದೊಂದು ರಾಜ್ಯವನ್ನು ಗೆದ್ದಾಗಲೂ, ಸೋತ ರಾಜನ ಕಿರಿಯ ಮಗಳನ್ನು ತನ್ನ ಅಂತಃಪುರಕ್ಕೆ ಸೇರಿಸಿಕೊಂಡಿದ್ದ. ಚಕ್ರಾಧಿಪತಿ ಕೇಳಬೇಕೇ.

ಒಂದು ಬೆಳಗಿನ ಝಾವ ಛದ್ಮ ವೇಶದಲ್ಲಿ ಚಕ್ರಾಧಿಪತಿ ಅರಮನೆಗೆ ಹಿಂತಿರುಗುತ್ತಿದ್ದಾಗ, ದೇವಸ್ಥಾನದ ಬಳಿ ರಂಗೋಲಿ ಹಾಕುತ್ತಿದ್ದ ಹೆಣ್ಣೊಂದನ್ನು ನೋಡಿದ. ಛದ್ಮ ವೇಶದಲ್ಲಿದ್ದ ಕಾರಣ ಅರಮನೆಗೆ ಬೇಗ ಹೋಗಿ, ಆಪ್ತ ಕಾರ್ಯದರ್ಶಿನಿಗೆ ಹೇಳಿದ. ಇಂಥ ರಸ್ತೆ, ಇಂಥ ದೇವಸ್ಥಾನದ ಬಳಿ ರಂಗೋಲಿ ಇಡುತಿದ್ದಾಕೆ ಯಾರು ಅಂತ ವಿಚಾರಿಸು ಎಂದು ಆಕೆ ಪುರೋಹಿತನ ಮಗಳು ಅಂತ ತಿಳಿಯಿತು ಅರಮನೆಗೆ ಪುರೋಹಿತನನ್ನು ಕರೆಸು ಅಂದ. ಪುರೋಹಿತನನ್ನು ಒಲಿಸಿಕೊಂಡರೆ ಚೆನ್ನು. ಬಾಗಿನ ಇಸುಕೊಳ್ಳಕ್ಕೆ ಅವನ ಮಗಳು ಬಂದೇ ಬರ್ತಾಳೆ ಅಂತ ಚಕ್ರವರ್ತಿ ಯೋಜನೆ ಹೂಡಿದ. ಪುರೋಹಿತ ಬಂದಾಗ ರಾಜ್ಯಲಕ್ಷ್ಮಿಯ ಸಂತುಷ್ಟಿಗೆ ಏನು ಮಾಡಬೇಕು ಅಂತ ಕೇಳಿದ ನೂರು ಯುದ್ಧ ಮಾಡಿದ್ದೀರಿ! ಲಕ್ಷಗಟ್ಟಲೆ ಜನ ಮರಣ ಹೊಂದಿದ್ದಾರೆ ಮೂರು ಯಜ್ಞಮಾಡಿದರೆ ದೈವಪ್ರೀತಿ ಆಗುತ್ತೆ ಮೂರು ಅಮಾವಾಸ್ಯೆ ಮೂರು ಯಜ್ಞಮಾಡಿ ಅಂದ ಪುರೋಹಿತ. ಸರಿ ಅಂತ ಒಪ್ಪಿದ ಚಕ್ರವರ್ತಿ

ಮೂರನೆ ಯಜ್ಞ ಮಾಡೋವಾಗ ಪೂರ್ಣಾಹುತಿ ಕೊಡೋವಾಗ, ಭವಳಿ ಬಂದು ಚಕ್ರವರ್ತಿ ಅಗ್ನಿ ಕುಂಡಕ್ಕೆ ಬಿದ್ದ.

* * *

ಸ್ವರ್ಗಕ್ಕೆ ಹೋದ ಮಹೇಂದ್ರ. ಬಾಗಿಲು ಕಾಯೋನು. "ಏನೇನು ಒಳ್ಳೆ ಕೆಲಸ ಮಾಡಿದಾನೆ ಭೂಲೋಕದಲ್ಲಿ" ಅಂತ ಚಿತ್ರಗುಪ್ತರನ್ನು ಕೇಳಿದ. ಇರೋ ಕೆಟ್ಟಕೆಲಸಗಳ ಪಟ್ಟಿಯನ್ನೇ ಒಪ್ಪಿಸಿದರು. ಪುಣ್ಯದ ಕೆಲಸ ಏನು ಮಾಡಿದ್ದ ಎಂದು ಕೇಳದ "ಮೂರು ಯಜ್ಞ ಮಾಡಿದ ಕಡೆ ಯಜ್ಞದಲ್ಲಿ ನಾನೇ ಪೂರ್ಣಾಹುತಿಯಾದೆ. ಸ್ವರ್ಗಕ್ಕೆ ಇದಕ್ಕಿಂತ ಬೇರೆ ಟಿಕೇಟ್ ಬೇಕೇ" ಎಂದ ಮಹೇಂದ್ರ ನೀನೇನು ಬೀಳಲಿಲ್ಲ ಪುರೋಹಿತ ನಿನ್ನ ನೂಕಿದ. ಇದು ಅವನು ಮಾಡಿದ ಪುಣ್ಯ. ಎಂದರು ಚಿತ್ರಗುಪ್ತರು. ಮೂರು ಯಜ್ಞ ಮಾಡಿದಾನೆ, ಅದಕ್ಕೋಸ್ಕರ ಇವನನ್ನು ನರಕಕ್ಕೆ ತೊಗೊಂಡು ಹೋಗಿ, ಮೂರು ಸರ್ತಿ ಇವನನ್ನು ಯಜ್ಞ ಮಾಡಿ ಅಂತ ಕಾವಲುಗಾರ ಹೇಳಿದ.

ಸ್ಟಕ್ - ಹೋಂ

" ಸ್ಟಕ್ ಹೋಂನ ಹೆಸರಿನಲ್ಲಿ, ನಿಮ್ಮನ್ನು ಸ್ವಾಗತಿಸುತ್ತೇನೆ" ಎನ್ನುತ್ತಾ ವಿಮಾನ ನಿಲ್ದಾಣದಲ್ಲಿ " ಮಾರ್ಗಮಿತ್ರ ನಮ್ಮನ್ನು ಎದುರ್ಗೊಂಡಿದ್ದು. ಹುಡುಗನಾಗಿದ್ದಾಗ " ಸ್ಟಾಕ್ ಹೋಂನಲ್ಲಿ ಜರ್ಮನ್ ಸಿಲ್ವರ್ ಪಾತ್ರೆಗಳು " ಅಂತ ಉರು ಹೊಡೆದಿದ್ದ ನನಗೆ ಇವನ್ಯಾಕೆ ಸ್ಟಕ್ ಹೋಂ ಅಂತಾನೆ, ಸರಿಯಾಗಿ ಇಂಗ್ಲೀಷಿನಲ್ಲಿ ಉಚ್ಚಾರ ಮಾಡುಕ್ಕೂ ಬರುಲ್ವಲ್ಲ ಅಂತ ಒಂದು ಕ್ಷಣ ಅನ್ನಿಸಿತು. ಆದರೆ ಹಿಂಡಿಗೆ ಹಿಂಡೇ ಬಸ್ ಹತ್ತಿರಕ್ಕೆ ಸುಂಕದ ಕಟ್ಟೇನ ತಟಾಯ್ಸಿಕೊಂಡು ಓಡುತ್ತಾ ಇತ್ತು. ಹೊರಲಾರದ ಅಂಗಿ ಹೊತ್ತು ನಾನೂ ಥಪ ಬುಸ ಅಂತ ಹಿಂಡು ಸೇರಬೇಕಾಯ್ತು. ಅಂದಮೇಲೆ ಯೋಚನೆಗೆ ಅವಕಾಶವೆಲ್ಲಿ ?

*   *   *   *

ಬಸ್‌ನಲ್ಲಿ ಎಲ್ಲರೂ ಕುಳಿತೆವು ತುಂತುರು ಹನಿ ಹಾಕುತ್ತಾ ಇತ್ತು. ಆ ಊರಿನ ಮಾರ್ಗಮಿತ್ರ ಪ್ಯಾಲೆಸ್ ಹೋಟಲಿನಲ್ಲಿ ನಿಮಗೆಲ್ಲಾ ಅಣಿಮಾಡಿದ್ದೇವೆ ಎಂದು ಹೇಳಿ ನಮ್ಮೂರಿನ ಮಾರ್ಗದರ್ಶಕರೊಡನೆ ಮಾತಾಡ್ತಾ ಕೂತುಬಿಟ್ಟ. ಬಸ್ ಹೊರಟಿತು.

ನಮ್ಮ ಮಲೆನಾಡು ತರಹಾನೆ ಆ ಊರು. ಬೆಟ್ಟದ, ಗುಡ್ಡದ ಅಂಚಿನಲ್ಲೇ ರಸ್ತೆ. ಎಂಟ್ಹತ್ತು ಅಂತಸ್ತಿನ ಮನೆಗಳು, ಆ ಗುಡ್ಡಗಳ ಮೇಲೇನೇ. ಎತ್ತರವಾಗಿ ಬೆಳೆದಿದ್ದ ಮರಗಳು. ಫರ್ಲಾಂಗಿಗೊಂದು ಸಣ್ಣ ಸೇತುವೆ. ಕೆಳಗೊಂದು ನಾಲೆ. ಎಲ್ಲಾ ದಕ್ಷಿಣ ಕನ್ನಡದ ತರಹಾನೆ! ಅದೇ ಸೊಗಸು, ಅದೇ ಚೆಂದ.

ಪೇಟೆ ದೊಡ್ಡ ರಸ್ತೆ ಸಿಕ್ಕಿತು ಎದುರು-ಬದುರು, ನಾಲ್ಕು-ನಾಲ್ಕು ಮೋಟಾರು ಬಸ್ಸುಗಳು ಎದೆಗೆ ಎದೆ ಸಮಗೂಡಿಸಿ ಹೋಗಬಹುದಾದ ರಸ್ತೆ ಮಧ್ಯದಲ್ಲೆಲ್ಲೋ ರಸ್ತೆ ಎಡಕ್ಕೆ ಬಸ್ಸು ನಿಂತಿತು. ಎಲ್ಲರೂ ಇಳಿದೆವು. ಪ್ಯಾಲೆಸ್ ಹೋಟೇಲ್ ಅಂತ ದೊಡ್ಡ ವಿದ್ಯುತ್ ಹಲಗೆ ಮಿಣುಕುತಿತ್ತು.

ಹೋಟಲೊಳಕ್ಕೆ ಕಾಲಿಟ್ಟೆವು. ಮೊದಲು ಹೋದ ಧಡಿಯ ಸ್ವಲ್ಪ ಜಾರಿದ. ಜಾರಿದವ ಬೇಗ ಎಚ್ಚೆತ್ತು ಸಗಣಿ ಮೇಲೆ ನಡೆಯೋನ ಹಾಗೆ ಮೆಲ್ಲಮೆಲ್ಲಗೆ ಖಾಲಿ

ಇದ್ದ ಕುರ್ಚಿ ಬಳಿಗೆ ಹೋಗಿ ಕುಳಿತ ಇದನ್ನು ನೋಡುತ್ತಿದ್ದಾಗ ನಾನು ಬಾಗಿಲ ಹತ್ತಿರವಿದ್ದ ಕಾಲ್ಹಾಸೆ ಮೇಲೆ ನಿಂತಿದ್ದೆ. ಹುಷಾರಾದೆ. ಹೆಜ್ಜೆಯ ಮೇಲೊಂದ್ಹೆಜ್ಜೆಯನಿಕ್ಕುತ, ಗೆಜ್ಜೆಯ ಕಾಲ ಶಬ್ದವ ಮಾಡದೆ, ಮೆಲ್ಲಗೆ ಹತ್ತಿರವಿದ್ದ ಕುರ್ಚೀನ ನಾನೂ ಹಿಡಿದು ಕೂತೆ ಕೂತ ಮೇಲೆ ಬೂಡ್ಸಿನ ಅಂಗಾಲು ನೋಡಿದೆ ಸಿಡುಬಿದ್ದ ಕಲೆ ಅದಕ್ಕಿತ್ತು. ಅಷ್ಟು ಹೊತ್ತಿಗೆ ಸರ್ ಅಂತ ಹರಿದ ಶಬ್ದವಾಯಿತು. ಕಣ್ಣೆತ್ತಿದೆ. ಏನು ಕಂಡಿದ್ದು ಅಂತೀರಿ!

ನಾನು ಕೂತಿದ್ದ ಕಡೆಯಿಂದ ಎಡಭಾಗದಲ್ಲಿ ಇಪ್ಪತ್ತು ಹೆಜ್ಜೆ ಹಾಕಿದರೆ ಹೋಟಲಿನ ಕಚೇರಿ ವರ್ಗದವರು ಕೆಲಸ ಮಾಡುವ ದೊಡ್ಡ ಮೇಜು. ಬಲಭಾಗದಲ್ಲಿ ಇಪ್ಪತ್ತು ಹೆಜ್ಜೆ ನಡೆದರೆ ಮಹಡಿಗೆ ಹೋಗುವ ಎತ್ತೇಣಿಗಳ ಕೊಠಡಿ.

ಕಣ್ಣೆತ್ತಿ ನೋಡಿದಾಗ, ಎಡಗಡೆ ಕೌಂಟರಿನಿಂದ, ಬಲಗಡೆ ಎತ್ತೇಣಿ ಬಳಿಗೆ ನಲವತ್ತು ಗಜ ದೂರವನ್ನು ಸುರಸುಂದರಿಯೊಬ್ಬಳು "ಜಾರು"ತ್ತಿದ್ದಳು. ಸುಮಾರು ಆರಡಿ ಎತ್ತರವಿರಬಹುದು ಆಕೆ, ಆ ಊರಿನವರೆಲ್ಲರ ತರಹ! ಸೊಂಟಕ್ಕೆ ನಾವೇನಾದರೂ ಪಟ್ಟಿ ಮಾಡಿಸಬೇಕಾದರೆ ಹನ್ನೆರಡು ಅಂಗುಲದ್ದೇ ಸಾಕಾಗ್ತಿತ್ತು. ಎಳೆ ಮುಖ ಇನ್ನೂ ಚಿಗಳಿ ತಿಂದ ಕಳೇನೇ ಇರಲಿಲ್ಲ ಚೂಪಾದ ಹಿಮ್ಮಡಿ ಇದ್ದ ಥಳಥಳಿಸುತ್ತಿದ್ದ ಷೂಗಳನ್ನು ಹಾಕಿಕೊಂಡಿದ್ದಳು. ಕೌಂಟರಿನ ಹತ್ತಿರ ಹೋಗಿ ತನ್ನ ಕೊಠಡಿಯ ಬೀಗದಕ್ಕೈ ತಗೆದುಕೊಂಡಿದ್ದಳು ಅವಸರದ ವಯಸ್ಸು ಬೇಗ ತಿರುಗಿದ್ದಳು ಆಗಲೇ ಹಿಮ್ಮಡಿಯ ಚೂಪು ನುಣುಪಾದ ನೆಲದಮೇಲೆ ಅಪ್ಪಾಲೆ ತಿಪ್ಪಾಲೆ ತಿರುಗಿತ್ತು. ಅದೇನೇನೋ ಸರ್ರ್! ಅಂತ ನನ್ನ ಎಚ್ಚರಗೊಳಿಸಿದ್ದು! ನೋಡ್ತಾನೇ ಇಧೀನಿ. ಬಲಗಾಲನ್ನು ಮುಂದಿಟ್ಟಳು. ಜಾರಿದಳು. ಬಲಗಾಲು ಮುಂದ್ಹೋಯ್ತು. ಎಡಗಾಲು ಹಿಂದಾಯ್ತು. ಕತ್ತರಿ ತರಹ ಕೂತುಕೊಂಡಳು. ಅರೆಕ್ಷಣ. ಚಿಮ್ಮಿ ನಿಂತಳು. ತಿರುಗಿ ನಾಲ್ಕು ಗಜ ಜಾರಿದಳು ನಾಲ್ಕು ಸರ್ತಿ ಹೀಗೆ "ಕತ್ತರಿ ಸಾಚು" ಮಾಡೋವೇಳೆಗೆ ಎತ್ತೇಣಿ ಬಾಗಿಲ ಹತ್ತಿರಕ್ಕೆ ಹೋಗಿದ್ದಳು. ಎತ್ತೇಣಿ ಬಾಗಿಲು ತೆಗೆದಿತ್ತು. ಅದನ್ನು ಸೇರಿಕೊಂಡಳು. ಮುಖ ಒರೆಸಿಕೊಂಡಳು ಎತ್ತೇಣಿ ಬಾಗಿಲು ಮುಚ್ಚಿಕೊಂಡಿತು ಆಗ ನಾನು ಮುಖ ಒರೆಸಿಕೊಂಡೆ. ಎಲ ಎಲ! ನನಗೆ ಹೀಗಾಗಿದ್ದರೆ, ನಾನು ಮೊದಲೇ ಹುಷಾರಾಗಿದಿದ್ದರೆ ಇದ್ದೊಂದು ಷರಾಯನ್ನ ಹರಿದುಕೊಂಡು ಬಿಡ್ತಿದ್ದನಲ್ಲಾ! ದೇವರೇ ಕಾಪಾಡಿದ. ನೆಲನೋಡಿಕೊಂಡು ನಡೀಬೇಕು ಈ ಹೋಟಲಲ್ಲಿ ಬಂದೋರು ಹೋದೋರನ್ನ ನೋಡ್ತಾ ಇದ್ದರೆ ಉಡುಪಿಗೆ ಊನ, ಅನ್ನೋ ವಿಷಯವನ್ನ ಮಂದಟ್ಟು ಮಾಡಿಕೊಂಡೆ.

"ಈ ಬೆಳಗ್ಗೇನೆ ಊರು ನೋಡಿಕೊಂಡು ಬರೋಣ! ಮಳೆ ಬರ್ತಾ ಇದೆ ಅಸ್ಪತ್ರೆಗಳನ್ನ ನೋಡಲು ಈಗ ಸಾಧ್ಯವಿಲ್ಲ. ಬೇಗ ಫಲಾಹಾರಮುಗಿಸಿ" ಎಂದು

" ಮಾರ್ಗ ಮಿತ್ರ " ಹೇಳಿದ. ಫಲಾಹಾರ ಅಂತಿದ್ದ ಹಾಗೇನೇ ಎಲ್ಲರೂ ಶಾಖಾಹಾರಿಗಳು ಧೌಡು ಓಡಿದೆವು ಇದ್ದ ಬ್ರೆಡ್ಡು ಬೆಣ್ಣೆಗಳನ್ನೆಲ್ಲಾ ಲಪಟಾಯಿಸಿಬಿಟ್ಟರೆ ಆಮೇಲೆ ಹೇಗಾರೂ ಆಗಲಿ ಅಂತ. ನಮ್ಮ ಮೇಜಿನ ಬಳಿಗೆ ಬಂದ ಮಾಣಿ ಒಲು ಚೆನ್ನಾಗಿ ಇಂಗ್ಲೀಷ್ ಮಾತನಾಡುತ್ತಿದ್ದ. ೧೮-೨೦ರ ಚೆಂದುಳ್ಳಿ ಗಂಡು. ನೀನ್ಯಾವ ಯಾವೂರಪ್ಪ ಯಾವ ಸೀಮೆಯೋನು ಎಂದು ಕೇಳಿದೆ. ಅವನೆಂದ, " ನಾನು ಇಂಗ್ಲೆಂಡಿನೋನು ಲಂಡನ್ನೇ ಹುಟ್ಟೂರು. ಅಡಿಗೆ ಕೆಲಸ ಕಲಿತುಕೊಳ್ಳುಕ್ಕೆ ಅಂತ ಮೂರನೆ ವರ್ಷದ ವ್ಯಾಸಂಗಕ್ಕೆ ನಮ್ಮನ್ನ ಹೊರದೇಶಗಳಿಗೆ ಕಳಿಸ್ತಾರೆ ನನ್ನ ಇಲ್ಲಿಗೆ ಕಳಿಸಿದರು. ಶಾಖಾಹಾರದ ಪ್ರವೀಣತೆಗೆ ನಾನು ವ್ಯಾಸಂಗ ಮಾಡ್ತಾ ಇಧೀನಿ ಅಂದ " ಹಾಗಾರೆ ನಮಗೆ ಒಳ್ಳೇದೇ ಆಯಿತು. ಏನಡಿಗೆ ಇವತ್ತು ನಿಮ್ಮನೇಲಿ, ನಮಗೆ ಸಪ್ಪೆ ಅಂದರೆ ಸೇರುಲ್ಲ ನೋಡಪ್ಪ ! ಕಡೆಗೆ ಉಪ್ಪಿನಕಾಯೋ, ಚಟ್ನಿಪುಡೀನೋ ಇದ್ದರೆ ಸಾಕು ಎಂದೆ. ಅವ ನಕ್ಕ. ಹೊರಟು ಹೋದ. ಏನೇನೋ ತಂದು ಬಡಿಸಿದ. ಬಡಿಸಿದ ಊಟಕ್ಕಿಂತ ಹಾಕಿದ ತಟ್ಟೆ ಎಷ್ಟು ಲಕ್ಷಣವಾಗಿತ್ತು, ಅಂತ, ಹೊಳೀತಾ ಇತ್ತು.

ಒಂದು ಚಮಚ ಬಾಯಿಗೆ ಹಾಕಿಕೊಂಡೆ. ತಬ್ಬಲಿ ರುಚಿ. ಅಸಹ್ಯ ಆಗೋ ಹಾಗೇನಿತ್ತಿಲ್ಲ ಆದರೆ ಅದಕ್ಕೆ ತಂದೆ ತಾಯಿ ಇತ್ತಿಲ್ಲ. ಗೋತ್ರ ಪ್ರವರ ಇತ್ತಿಲ್ಲ. ಎಲ್ಲೋ ಹುಟ್ಟಿ ಹೇಗೋ ಬೆಳೆದು, ಬೇಯಿಸಿಕೊಂಡು ಬಿದ್ದಿತ್ತು ನಮ್ಮ ಮುಂದೆ. ಬ್ರೆಡ್ಡು ಚೂರನ್ನು ತೆಗೆದುಕೊಂಡೆ. ಅದೇತಾನೇ ಆ ದೇಶಗಳಲ್ಲಿ ಜೀವನದ ಊರುಗೋಲು !

ಅಷ್ಟು ಹೊತ್ತಿಗೆ ಆ ಇಂಗ್ಲೀಷ್ ಮಾಣಿ ಬಂದ. ಒಂದು ಸಣ್ಣ ಡಬ್ಬೀನ ತಂದಿದ್ದ. ಅದನ್ನು ನನ್ನೆದುರಿಗೆ ಇಟ್ಟ. " ಲಂಡನ್ನಿನಲ್ಲಿದ್ದಾಗ ದೇವರಾಯ ಸಮುದ್ರದವರು ಒಬ್ಬರು ಸಂಸಾರ ಮಾಡಿಕೊಂಡಿದ್ದರು. ಅವರ ಮನೆಗೆ ಆಗಾಗ್ಗೆ ಹೋಗ್ತಾ ಇದ್ದೆ ಅವರ ಮನೇಲಿ ಹಿಟ್ಟನ್ನು ಉಬ್ಬಿಸಿ ಬನ್ ತರಹ ತಿಂಡಿ ಮಾಡ್ತಾ ಇದ್ದರು ಈ ಪುಡೀನ ಅದಕ್ಕೆ ಹಾಕಿಕೊಂಡು, ಬೆಣ್ಣೆ ಸವರಿ ತಿಂದರೆ ರುಚಿ ಏರುತಿತ್ತು. ಅವರಿಂದಲೇ ನಾನು ಒಂದು ಪುಟ್ಟಡಬ್ಬ ಇಸುಕೊಂಡು ಈ ಊರಿಗೆ ಬಂದೆ ಬೇಜಾರಾದಾಗ ಕೈನೆರವಾಗಿರಲಿ ಅಂತ ನಿಮ್ಮನ್ನು ನೋಡಿದಾಗ, ಕೊಡೋಣ ಸ್ವಲ್ಪ ಅನ್ನಿಸ್ತು ಅಂದ. ಕರಿಬೇವಿನ ಸೊಪ್ಪು, ಮೆಂತ್ಯ, ಹುರಿಗಡಲೆ, ದಿಟವಾಗಲೂ ಅಂಥ ಚಟ್ನಿಪುಡೀನ ನಮ್ಮೂರಲ್ಲಿದ್ದಾಗಲೂ ತಿಂದಿರಲಿಲ್ಲ. ಏನು ತಂದು ಬಡಿಸಿದ್ದನೋ ಅದಕ್ಕೆಲ್ಲ ಇದನ್ನು ಕಲೆಸಿ ತಿಂದೆ, ತೇಗಿದೆ. ' ಅನ್ನದಾತಾ ಸುಖೀಭವ ' ಅಂತ ಹೇಳಿ ಆ ಮಾಣಿಗೆ ' ದೀರ್ಘಾಯುಷ್ಯಮಸ್ತು ' ಸಂಸ್ಕೃತದಲ್ಲೇ ಆಶೀರ್ವಾದ ಮಾಡಿದೆ.

ಅಲ್ಲಿಂದ ಬಸ್ಸಿನಲ್ಲಿ ಎಲ್ಲರೂ ಕುಳಿತೆವು. ಮಾರ್ಗಮಿತ್ರ ತನ್ನ ವರದಿಯನ್ನು ರಷ್ಯಾದಲ್ಲಿನಂತೆಯೇ ಶುರುಹಚು ತಾನೆ ಅಂತಿದ್ದೆ. ಆದರೆ ಅವನು ನಾಲಗ್ಯೇನ

ಭೂಬಿಟ್ಟಾಗ, ಅದಕ್ಕೇನು ಅಂಕೆ ಶಿಕ್ಷೆ ಇದ್ದ ಹಾಗಿರಲಿಲ್ಲ. ಸರ್ಕಾರ, ಆಳಧಿಕಾರಗಳ ಅನ್ನೋ ಭಯವೇ ಇರಲಿಲ್ಲ. "ನಮ್ಮದು ಸಮತಾ ಸಮಾಜ. ನಮ್ಮ ನೆರೆಯು ವರದು ಅಂತ ಪೂರ್ವದ ಕಡೆಗೆ ಬೆರಳ ತೋರಿಸಿ, ಕಮ್ಯೂನಿಸಂ! ನಮ್ಮಲ್ಲೂ ಕಮ್ಯೂನಿಸ್ಟರು ಇದಾರೆ. ಸಾಕಷ್ಟು ಇದಾರೆ. ಆದರೆ ಪ್ರಜೆಗಳ್ಯಾರೂ ಲಕ್ಷ್ಯವೇ ಮಾಡುಲ್ಲ. ಇವರಾದರೇನು, ಅವರಾದರೇನು, ಇಬ್ಬರೂ ಒಂದೇ ಮಾಡೋದು. ಅವರು ಮಾಡೋದು ಮಾಡಿಕೊಳ್ಳಲಿ ನಮಗೆ ಮಾತನಾಡುಕ್ಕೆ ಸ್ವತಂತ್ರ ಇದ್ದರೆ ಸಾಕು" ಎಂದ ಪೀಠಿಕೆ ಹಾಕುತ್ತ.

ಆ ಸ್ಥಳ, ಈ ಕಟ್ಟಡ, ದೊಡ್ಡ ನಾಲೆ, ಚಿಕ್ಕ ನಾಯಿ ಎಲ್ಲವನ್ನೂ ವಿವರಿಸ್ತಾ ವಿವರಿಸ್ತಾ, ನೀವೇನಾದರೂ ಕೇಳೋದಿದ್ದರೆ ಕೇಳಿ ಅಂತ ಹೇಳಿದ

ಅಷ್ಟೂ ದೂರ ರಸ್ತೆಯ ಎರಡೂ ಕಡೆಗಳಲ್ಲಿ, ನಮ್ಮ ಹಳ್ಳಿ ಸಂತೇಲಿ ಗಾಡಿ ಗಳನ್ನ ಒಂದರ ಹಿಂದೆ ಒಂದು ಬಿಚ್ಚಿ ಬಿಟ್ಟಿರುಲ್ಲವೇ ಹಾಗೆ, ಅಲ್ಲಿ ತರಹಾವಾರಿ ಮೋಟಾರುಗಳು ನಿಂತಿದ್ದುವು ಒಂದು ರಸ್ತೇಲಿ ಸುಮಾರು ೬೦-೮೦. ಎಂಟಡಿ ಕಂಚಿ ಕಡಸಿನಿಂದ ಶುರುವಾಗಿ, ಹದಿನಾರಡಿ ಹುಲಿ, ಮೂವತ್ತಡಿ ತಿಮಿಂಗಿಲದ ತರಹ ಇದ್ದ ಮೋಟಾರು ಗಾಡಿಗಳು—ಇವನ್ನು ಕಂಡು ಹೊಟ್ಟೆಕಿಚ್ಚಾಗಿತ್ತು.

"ಇದೇನು ಇಷ್ಟು ಮೋಟಾರುಗಳು, ಈ ಊರಲ್ಲಿ! ಬಿಕೋ ಅಂತ ಬೀದಿ ಬಸವಗಳ ಹಾಗೆ ಬಿದ್ದಿವೆಯಲ್ಲಾ" ಎಂದು ಕೇಳಿದೆ.

ಮಾರ್ಗಮಿತ್ರ ರಸ್ತೇನ ನೋಡಿದ. "ನಿಮ್ಮ ಪ್ರಶ್ನೆ ಅರ್ಥವಾಯಿತು. ನಮ್ಮೂರಲ್ಲಿ ಆರು ಜನಕ್ಕೆ ಒಂದು ಮೋಟಾರುಕಾರು ಇದೆ ಎಲ್ಲ ತರಹಾ ಕಾರುಗಳೂ ಇವೆ. ಮೂರು ಜನಕ್ಕೆ ಒಂದು ಮನೆ ಇದೆ. ಇಬ್ಬರಿದ್ದರೆ ಮನೆ; ಮೂರು ಜನ ಇದ್ದರೆ ಸಂತೆ ಅಲ್ಲವೇ? ಮೂರು ಹೆಂಗಸರಿದ್ದಾರೆ ಒಬ್ಬ ಗಂಡಸಿಗೆ ಎಲ್ಲ ತರಹಾ ಹೆಂಗಸರೂ ಇದ್ದಾರೆ. ಎಲ್ಲಾರು ಸಂಪಾದಿಸ್ತಾರೆ. ಗಂಡಸರು ಖುಷಿಯಾಗಿದ್ದಾರೆ. ಅದಕ್ಕೇ ನೋಡಿ, ಜೋಡೀಗೊಂದು ಕಾರು ಬೇಕೇಬೇಕು. ಮನೆ ಮಡದಿ ಇದ್ದರೆ ಬೇಕೇಬೇಕು ಮನೆ ಇಲ್ಲದೆ ಇದ್ದರೆ ಅತ್ಯವಶ್ಯಕ" ಎಂದ

ನನಗೆ ಎರಡು ಕಾರಿದೆ ಆದರೆ ನನ್ನ ಹೆಂಡತಿಗೆ ಗೊತ್ತಿಲ್ಲ ಅಂತ ಕಣ್ಣು ಹೊಡೆದ. ೫೦ ರ ಪ್ರಾಯ ಮಾರ್ಗಮಿತ್ರನಿಗೆ. ಈಗರ್ಥವಾಯ್ತು "ಸ್ವೀಕ್ ಹೋಂ" ಅಂತ ಯಾಕೆ ಕರೀತಾರೆ ಅಂತ. ಸ್ವಾಕ್ ಇಲ್ಲ ಹೋಂನಲ್ಲಿ ಪಾಪ! ಸ್ವೀಕ್!

'ಬಿಟ್ಟಿ' ಪಡೆಯುವ ಸ್ವಾತಂತ್ರ್ಯ

—:o:—

ಸರ್ವತಂತ್ರ ಸ್ವತಂತ್ರರೆನಿಸಿದ ನಮಗೆ ಇಂದು ಸ್ವಾತಂತ್ರ್ಯ ಯಾವುದಕ್ಕಿದೆ, ಯಾವುದಕ್ಕಿಲ್ಲ, ಎಂದು ಹೇಳಲು ಸಾಧ್ಯವಿಲ್ಲ. ಯಾವುದೇನೇ ಇರಲಿ, 'ಬಿಟ್ಟಿ ಹೊಡೆಯುವ ಅಥವಾ ಪುಕ್ಕಟೆ ಗಿಟ್ಟಿಸುವ ಪ್ರವೃತ್ತಿಗೆ ನಮ್ಮಲ್ಲಿ ಯಾವ ಅಡೆ ತಡೆಯೂ ಇಲ್ಲವೆನ್ನಬಹುದು.

ಹಾಗೆ ನೋಡಿದರೆ ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಕೂಡ ಬಿಟ್ಟಿಗೆ ಬರಗಾಲ ವಿರಲಿಲ್ಲ ಹಳ್ಳಿಕಡೆ ಭೂಮಾಲೀಕರಿಗಾಗಲಿ, ರೈತರಿಗಾಗಲಿ, ಬಿಟ್ಟಿ ಎನ್ನುವ ಪದ ಸುಪರಿಚಿತವಾಗಿತ್ತು. ಭೂಸ್ವಾಮ್ಯದ ಬೀಜಮಂತ್ರವದು. ಭಾರತೀಯ ಗ್ರಾಮೀಣ ಜೀವನದ ಇತಿಹಾಸವನ್ನು ಬರೆಯುವ ಸಂದರ್ಭದಲ್ಲಿ ಈ 'ಬಿಟ್ಟಿ' ಎಂಬ ಪದವನ್ನು ಸುವರ್ಣಾಕ್ಷರಗಳಲ್ಲಿ ಬರೆಯಬೇಕೆಂದು ಕೆಲವರೂ, ರಕ್ತಾಕ್ಷರ ಗಳಲ್ಲಿ ಬರೆಯಬೇಕೆಂದು ಹಲವರೂ ಒತ್ತಾಯಪಡಿಸಬಹುದು. ಅಂತೂ ಸದ ಅದು ಗತ ಇತಿಹಾಸಕ್ಕೆ ಸೇರಿದ ವಿಷಯವೇನೂ ಅಲ್ಲ. 'ಬಿಟ್ಟಿ' ಪದ್ಧತಿ ಇನ್ನೂ ಇದೆ.

ಏನೂ ಮಾಡದೆ, ಏನನ್ನೂ ಕೊಡದೆ, ಏನನ್ನಾದರೂ ಗಿಟ್ಟಿಸುವುದಕ್ಕೆ 'ಬಿಟ್ಟಿ' ಹೊಡೆಯುವುದು ಎಂದು ಸರಳವಾಗಿ ಹೇಳಬಹುದು. ಈ ಲಂಚ ರುಷುವತ್ತು ಗಳಿವೆಯಲ್ಲ ಅವನ್ನು ಬಿಟ್ಟಿ ಎಂದರೆ ಎಲ್ಲರೂ ಒಪ್ಪುವರೋ ಇಲ್ಲವೋ. ಏಕೆಂದರೆ ಈ ಎಡಗೈ ಸ್ವೀಕಾರಗಳೆಲ್ಲ ಏನಾದರೂ (ಸೀತಿಗೆಟ್ಟ, ಸೇವೆಯನ್ನು ಸಲ್ಲಿಸಿದುದ) ಕ್ಕಾಗಿಯೇ ಅಲ್ಲವೇ? ಬಿಟ್ಟಿಯಾದರೂ ತೀರ ಪುಕ್ಕಟೆ ಸಿಗುವಂಥಾದ್ದು!

ಇನ್ನು ಬಿಟ್ಟಿ ಹೊಡೆಯುವುದನ್ನು ಭಿಕ್ಷೆಪಡೆಯುವುದಕ್ಕೆ ಹೋಲಿಸಿದರೂ ಹಲವರು ರೇಗಬಹುದು. ಭಿಕ್ಷೆ ಬೇಡಿ ಪಡೆಯುವಂಥಾದ್ದು; ಬಿಟ್ಟಿಯಾದರೋ ತಾನಾಗಿ ಒರುವಂಥಾದ್ದು. ಅದರಲ್ಲಿ ಅಗೌರವವೇನಿಲ್ಲ ಎಂಬುವಾಗಿ ಬಿಟ್ಟಿಯನ್ನು ಸಮರ್ಥಿಸಬಹುದು ಅನೇಕರು.

* * * *

ಹೆಚ್ಚು ಕಡಮೆ ಬಿಟ್ಟಿ ಹೊಡೆದಂತೆಯೇ ಗಿಟ್ಟಿಸಿದ್ದ ಭಾರತವನ್ನು ಬ್ರಿಟಿಷರು ಕೊನೆಗೊಮ್ಮೆ ಬಿಟ್ಟೇ ಹೋದರಲ್ಲ, ಆಗ ಅವರಿಗೆ ಎಷ್ಟು ಕಷ್ಟವಾಯಿತೋ ಅಂತೂ ದೇಶ ಸ್ವತಂತ್ರವೆನಿಸಿತು.

ಈ ಸ್ವಾತಂತ್ರ್ಯ ಕೂಡ ಬಿಟ್ಟಿ ಬಂದಿದ್ದೇ ಎಂದು ಹಲವರು ಅಂದುಬಿಡುವುದುಂಟು. ಗಳಿಗೆ ಆರ ಅನಂತರ ಹುಟ್ಟಿದ ಎಳೆ ನಿಂಬೆಕಾಯಿಗಳು ಹೀಗೆಂದರೆ ಆಶ್ಚರ್ಯವಿಲ್ಲ. ಆದರೆ ಹಳೇ ಹುಲಿಗಳು ಕೂಡ ಯಾವುದೋ ಯಾರ ಮೇಲಿನದೋ ಕರುಬಿನಿಂದ ಹೀಗಾಡುವುದಿದೆ.

ದೇಶದಲ್ಲಿ ಆಗಾಗ ಸಂಭವಿಸುವ ಆಂತರಿಕ ಗಲಭೆಗಳನ್ನು ನೋಡುವಾಗ, ಅವುಗಳಿಗೆ ಕಾರಣರಾದ ಪುಣ್ಯಾಪುರುಷರೆಲ್ಲ ಈ ದೇಶಕ್ಕೆ ಸ್ವಾತಂತ್ರ್ಯ ಬಿಟ್ಟಿ ಬಂದಿದ್ದೆಂದೇ ಭಾವಿಸಿರಬೇಕೆಂಬುದರಲ್ಲಿ ಸಂಶಯವಿಲ್ಲ.

ಅದೇನೇ ಇರಲಿ; ಸ್ವಾತಂತ್ರ್ಯ ದೊರೆತಮೇಲೆ ಎಲ್ಲದರಲ್ಲಿಯೂ ಪ್ರಗತಿಯಾಯಿತೆನ್ನುತ್ತಾರೆ. ಬಿಟ್ಟಿಗಾಗಿ ಬಾಯಿಬಿಡುವ ಪ್ರವೃತ್ತಿಯೂ ನಮ್ಮಲ್ಲಿ ಸಾಕಷ್ಟು ಚೆನ್ನಾಗಿ ಬೆಳೆದಿದೆಯೆಂಬುದರಲ್ಲಿ ಸಂಶಯವಿಲ್ಲ. ಸರಕಾರವೇ ದೇಶದ ಅಭಿವೃದ್ಧಿಗೋಸ್ಕರ ಆ ದೇಶದಿಂದ ಈ ದೇಶದಿಂದ ಹಣ, ಆಹಾರ ಹಾಗೂ ಯಂತ್ರ ಸಾಮಗ್ರಿಗಳನ್ನು ಸಾಲವಾಗಿ ಮಾತ್ರವಲ್ಲದೆ ಬಿಟ್ಟಿಯಾಗಿಯೂ ಪಡೆಯುತ್ತಿರುವುದನ್ನು ಕಂಡು ನಾವು ಕೂಡ ಉತ್ತೇಜನಗೊಂಡಿದ್ದೇವೆಂದು ಹೇಳುವುದು ಶುದ್ಧ ಕುಹಕವಾಗಬಹುದಾದರೂ ಪರದೇಶಗಳಿಂದ ಬೇರೆ ಬೇರೆ ಸಂಸ್ಥೆಗಳ ಮುಖಾಂತರ ಬರುವ ಬಿಟ್ಟಿ ಹಾಲಿನಹುಡಿ, ಬಿಟ್ಟಿ ತುಪ್ಪ ಮೊದಲಾದುವುಗಳಿಗೆ ಅನುಕೂಲಸ್ಥರೂ ಕೂಡ ಪರದಾಡುವುದನ್ನು ಕಾಣಬಹುದೆಂಬುದು ನಿಜ. ಬಡವರಿಗೆ ಬಿಟ್ಟಿ ವಿದ್ಯಾಭ್ಯಾಸ ಕೊಡೋಣ ಎಂದು ಸರಕಾರ ಹುಕುಂ ಹೊರಡಿಸಿದ ಕೂಡಲೆ ಸಹಿಹಾಕಿ ಸಂಬಳ ಪಡೆಯುವವರನ್ನುಳಿದು ಇತರರೆಲ್ಲ ಕಡು ಬಡವರಾಗುತ್ತಾರೆ. ಅನೇಕರ ಮಕ್ಕಳು ಸಂಬಳ ಕೊಟ್ಟು ಶಾಲೆಗೆ ಹೋದರೆ ಅವರಿಗಾಗುವ ಖರ್ಚು ಸಮುದ್ರದಿಂದ ಒಂದು ಕೊಡ ನೀರು ತೆಗೆದಷ್ಟೆ. ಆದರೂ ಬಿಟ್ಟಿ ಸಿಗುವಂಥಾದನ್ನು ಏಕೆ ಬಿಡಬೇಕು ಎಂಬ ಚಪಲ ಅಷ್ಟೆ.

ಯಾವುದಾದರೂ ಪರದೇಶದ ರಾಯಭಾರಿ ಕಚೇರಿ ಒಂದು ಬಿಟ್ಟಿ ಪತ್ರಿಕೆಯನ್ನೋ ಬಿಟ್ಟಿ ಪುಸ್ತಕವನ್ನೋ ಕಾರ್ಡು ಬರೆದು ಹಾಕಿದವರಿಗೆಲ್ಲ ಕಳುಹಿಸಲಾಗುವುದೆಂದು ಪ್ರಕಟಿಸಿದರೆ ಸಾಕು, ಜನ್ಮೇಪಿ ಪುಸ್ತಕಗಳನ್ನು ಕೊಂಡುಕೊಳ್ಳದವರೆಲ್ಲ ಯಾರನ್ನಾದರೂ ಬೇಡಿ ಕಾಡಿ ವಿಳಾಸಪಡೆದು ಒಂದೊಂದು ಕಾರ್ಡು ಬರೆದು ಹಾಕುತ್ತಾರೆ. ಬಿಟ್ಟಿ ಬಂದ ಪತ್ರಿಕೆ, ಪುಸ್ತಕಗಳನ್ನು ಅಂದವಾಗಿ ಪೇರಿಸಿಟ್ಟು, ಮನೆಯ ವಾತಾವರಣ ಪುಸ್ತಕದ ಸುಳಿವಿಲ್ಲದೆ ಬಿಕೋ ಎನ್ನುವುದನ್ನು ಕೊಂಚ ಸುಧಾರಿಸಿ, ಅಂತೂ ಒಂದು ಪುಸ್ತಕ ಭಂಡಾರವಾಯಿತು ಎಂದು ಸಮಾಧಾನ ಹೊಂದುತ್ತಾರೆ. ಕೆಲವರು ಒಂದು ಪುಟ್ಟ ಕೈಪಿಡಿಯಾದರೂ ಸರಿಯೆ, ಬಿಟ್ಟಿ ಎಂದ ಕೂಡಲೆ ಅದಕ್ಕಾಗಿ ಬರೆದು ಹಾಕುತ್ತಾರೆ. ಕೆಲವರಿಗೆ ಕೇವಲ ಕೆಟಲಾಗುಗಳಾದರೂ ಸಲ್ಲುತ್ತವೆ ನಾವು ಬಿಟ್ಟಿಪ್ರಿಯರೆಂದು ಕಂಡುಕೊಂಡ ಕೆಲವರು ವಿದೇಶೀ ಪ್ರಚಾರ

ಪ್ರವೀಣರು ತಮ್ಮ ಇಂತಹ ಪತ್ರಿಕೆಗಳಿಗೆ ಇಷ್ಟು ಹಣ ಕೊಟ್ಟು ಚಂದಾದಾರರಾದರೆ ಒಂದೊಂದು ಕ್ಯಾಲೆಂಡರನ್ನೋ, ಚಿತ್ರಗಳನ್ನೋ ಬಿಟ್ಟಿ ಕೊಡುತ್ತೇವೆಂದು ಪ್ರಕಟಿಸುತ್ತಾರೆ. ಅಂಥ ಬಲೆಬೀಸಿದಾಗಲೆಲ್ಲ ನಮ್ಮಲ್ಲಿ ಬುಟ್ಟಿಗೆ ಬೀಳುವ ಮೀನುಗಳು ಅಸಂಖ್ಯಾತವಾಗಿವೆ.

ಕ್ಯಾಲೆಂಡರ್ ಎಂದಕೂಡಲೆ ಹೊಸ ವರ್ಷದ ಕ್ಯಾಲೆಂಡರ್ ಸೀಸನ್‌ನ ನೆನಪಾಗುತ್ತದೆ. ಡಿಸೆಂಬರ್ ಕೊನೆಯಿಂದ ಫೆಬ್ರವರಿ ಮಾರ್ಚ್ ತಿಂಗಳವರೆಗೂ ಹೊಸ ಕ್ಯಾಲೆಂಡರುಗಳಗಾಗಿ ಮುಖ್ಯ ಅವನ್ನು ಬಿಟ್ಟಿ ಹೊಡೆಯುವುದಕ್ಕಾಗಿ ಹಲ್ಲು ಕಿರಿದು ಅಲೆದಾಡುವವರೂ ಅಂಗಲಾಚುವವರು ಹಿಂದೆಯೂ ಇದ್ದರು, ಇಂದಿಗೂ ಇದ್ದಾರೆ, ಎಂದೆಂದಿಗೂ ಇರುತ್ತಾರೆ. ಬಿಟ್ಟಿ ಕ್ಯಾಲೆಂಡರ್ ಗಿಟ್ಟಿಸುವುದು ಆ ಋತುವಿನ ಧರ್ಮವೆಂದೇ ಅನೇಕರ ಭಾವನೆ. ಕೆಲವರಿಗೆ ಬಿಟ್ಟಿ ಕ್ಯಾಲೆಂಡರು ದೇವರ ಪ್ರಸಾದದಷ್ಟು ಪವಿತ್ರ. ಇದನ್ನು ಕಂಡುಕೊಂಡ ಬೇರೆ ಬೇರೆ ವಸ್ತುಗಳ ಉತ್ಪಾದಕರು ಇಂಥ ಸೋಪು ಕೊಂಡುಕೊಂಡರೆ ಒಂದು ಬಿಟ್ಟಿ ಕ್ಯಾಲೆಂಡರ ಉಚಿತ, ಈ ನಶ್ಯ ಕೊಂಡರೆ ದೇವಿಯ ಚಿತ್ರವಿರುವ ಕ್ಯಾಲೆಂಡರ್ ಪುಕ್ಕಟೆ ಎಂದು ಸಾರುತ್ತಾರೆ. ಅವರ ವಸ್ತುಗಳಿಗೆ ಗಿರಾಕಿಗಳು ಸಿಕ್ಕಿದಂತಾಯಿತು; ಗಿರಾಕಿಗಳಿಗೋ ಬಿಟ್ಟಿ ಕ್ಯಾಲೆಂಡರ್ ದಕ್ಕಿದುದಕ್ಕಾಗಿ ಅಪರಿಮಿತ ಆನಂದ. ಅವರು ದುಡ್ಡೇನಾದರೂ ಕೊಟ್ಟಿದ್ದರೆ ಅದು ಕೊಂಡುಕೊಂಡ ವಸ್ತುವಿಗೇ ಹೊರತು ಕ್ಯಾಲೆಂಡರಿಗಲ್ಲ! ಹಾಗಲ್ಲವೆಂದರೆ ಯಾರು ಒಪ್ಪುತ್ತಾರೆ?

ಈಚೀಚೆಗೆ ಕ್ಯಾಲೆಂಡರ್ ಮಾತ್ರವಲ್ಲ; ಲೋಟ, ಚಮಚ ಅಥವಾ ಇನ್ನೇನಾದರೂ ವಸ್ತುವನ್ನೇ ಮಾರಾಟದ ವಸ್ತುವಿನೊಡನೆ ಪುಕ್ಕಟೆಯಾಗಿ ಕೊಡುವ ಏರ್ಪಾಡನ್ನಿಟ್ಟುಕೊಂಡು ವ್ಯಾಪಾರಿಗಳು ಗಿರಾಕಿಗಳ ಬಳಗವನ್ನು ಬೆಳೆಸಲು ಯತ್ನಿಸುತ್ತಿದ್ದಾರೆ. ಜನಗಳ ಚಪಲವನ್ನವರು ಕಾಣರೆ! ಒಂದು ಬಟ್ಟೆಗೆ ಇಪ್ಪತ್ತು ರೂಪಾಯಿ ಬೆಲೆ ಹೇಳಿದರೆ ಚೌಕಾಸಿಯೇ ಚೌಕಾಸಿ. ಅದೇ ಬಟ್ಟೆಗೆ ಇಪ್ಪತ್ತೈದು ರೂಪಾಯಿ ಬೆಲೆಯೆಂದು ಹೇಳಿ ಅದನ್ನು ಕೊಂಡುಕೊಳ್ಳುವವರಿಗೆ ಯಾವುದೋ ಒಂದು ಚಿಕ್ಕ ವಸ್ತು ಉಚಿತ ಎಂದರೆ ಸಾಕು, ಮರುಮಾತಿಲ್ಲದೆ ಗಿರಾಕಿ ಅದನ್ನು ಎತ್ತಿಕೊಳ್ಳುತ್ತಾನೆ ಅದರ ಜೊತೆಗೆ ಸಿಗುವುದು ಒಂದು ಪೆಕೆಟ್ ಬ್ಲೇಡಾದರೂ ಸರಿಯೆ ಗಿರಾಕಿ ಕ್ಷೌರಕ್ಕೆ ಸಿದ್ಧ!

ಇನ್ನು, ಕಾಫಿ ತಿಂಡಿ ಬಿಟ್ಟಿ ಹೊಡೆಯುವವರಂತೂ ಅಲ್ಲೇನು ಇಲ್ಲೇನು, ಎಲ್ಲೆಲ್ಲಿಯೂ ಇದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿಯೇ ಬಳಕೆಗೆ ಬರುವ ಈ ಅಭ್ಯಾಸ ಅಭ್ಯಾಸವೇನು, ರೋಗ, ಅನೇಕರಲ್ಲಿ ಬಲಿತ ಮೇಲೆ ಇನ್ನು ಪ್ರಬಲವಾಗುತ್ತದೆ. ನೌಕರಿ ಹಿಡಿಯುವವರಲ್ಲಿ ಕೆಲವರಿಗಂತೂ ಇದು ಬದುಕಿನ ಆದರ್ಶವಾಗಿಬಿಡುವುದುಂಟು. ನೌಕರಿಯಲ್ಲಿ ಮೇಲೇರುವ ಹಳುವರಿಗೆ ಬಿಟ್ಟಿ ಕಾಫಿ ತಿಂಡಿ ಮಾತ್ರವಲ್ಲ

ಊಟ, ಗೀಟ ಇನ್ನೇನೇನು ಕೂಡ ಬಿಟ್ಟಿ ದೊರೆಯಬಹುದು, ಅವೆಲ್ಲ ಬಿಟ್ಟಿ ದೊರೆಯುದಿದ್ದರೆ ಬದುಕು ಅಸಹನೀಯವಾಗಿಬಿಡುತ್ತದೆ. ಕಾಸು ಕೊಟ್ಟು ಕೊಂಡು ಹೊಟ್ಟೆ ತುಂಬಿಸಿದರೆ ಉಂಡಿದ್ದು ತಿಂದಿದ್ದು ಮೈಗೇ ಹಿಡಿಯುವುದಿಲ್ಲವಂತೆ ಕೆಲವರಿಗೆ. ಅಂಥವರು ನಮ್ಮ ಕನಿಕರಕ್ಕೆ ಪಾತ್ರರು. ನಿವೃತ್ತರಾದ ಮೇಲೆ ಅವರ ಗೋಳೇಗೋಳು ಉದ್ದಕ್ಕೂ ಬಿಟ್ಟಿಗಿಟ್ಟಿಸಿಯೇ ಬದುಕಿದ ಅವರ ಬಡ ಜೀವಕ್ಕೆ ಎಲ್ಲವನ್ನೂ ಕಾಸು ಕೊಟ್ಟೇ ಕೊಂಡುಕೊಳ್ಳುವಾಗ ಎಷ್ಟು ಕಷ್ಟವೋ!

—

ನಮ್ಮ ಜನ ಬಿಟ್ಟಿ ಪ್ರಿಯರೆಂಬುದನ್ನು ಸರಕಾರವೂ ಅರಿತುಕೊಂಡಿರುವುದು ಸಂತೋಷದ ವಿಷಯ. ಯೋಜನೆಗಳಿಗೆ ಹಣ ಒದಗಿಸುವುದಕ್ಕಾಗಿ, ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳನ್ನು ಮಾರಲಿಕ್ಕಿಟ್ಟುಕೊಂಡು ಕೊಂಡವರಿಗೆ ಸಾಕಷ್ಟು ಬಡ್ಡಿ ದೊರೆಯುವುದೆಂದು ಎಷ್ಟು ತುತೂರಿ ಊದಿದರೂ ಅವುಗಳನ್ನು ಒತ್ತಾಯವಿಲ್ಲದೆ ಮುಂದೆಬಂದು ಕೊಂಡುಕೊಳ್ಳುವವರು ಬಹಳ ಸ್ವಲ್ಪ ಮಂದಿ. ಸರಕಾರ ಬಲಾತ್ಕಾರದಿಂದ ಅಧಿಕಾರಿಗಳ ಮೂಲಕ ಅವುಗಳನ್ನು ದುಡ್ಡಿದ್ದವರ ಕುತ್ತಿಗೆಗೆ ಕಟ್ಟಿ ದಾಟಿಸಬೇಕಾದ ಪ್ರಸಂಗಗಳೂ ಇದ್ದವು. ಆದರೆ ಈಗ ನೋಡಿ, ಸರಕಾರದ ಯಾವ ಶಕುನಿಯ ಮಿದುಳೋ ಬಹುಮಾನ ಪತ್ರಗಳ ಯೋಜನೆಯನ್ನು ಮುಂದಿಟ್ಟಿತು. ಅವುಗಳನ್ನು ಕೊಂಡುಕೊಂಡವರ ಹಣಕ್ಕೆ ಐದು ವರ್ಷಗಳ ಕಾಲ ಕಾಸು ಬಡ್ಡಿಯಿಲ್ಲ. ಆದರೂ ಅದೃಷ್ಟವಿದ್ದರೆ ಸಾವಿರಾರು ರೂಪಾಯಿ ಬಹುಮಾನ ಸಿಗುವುದಲ್ಲ! ಬಿಟ್ಟಿಯಾಗಿ ಅಷ್ಟೊಂದು ಹಣ! ಅದಕ್ಕಾಗಿ, ಜನ ಹೊಟ್ಟೆಬಾಯಿ ಕಟ್ಟಿಯಾದರೂ ಆ ಬಹುಮಾನ ಪತ್ರಗಳನ್ನು ಕೊಂಡುಕೊಳ್ಳಲು ಮುಂದೆ ಬಂದರು. ಮಾತ್ರವಲ್ಲದೆ ಸ್ವಲ್ಪಕಾಲ ಬಹುಮಾನ ಪತ್ರಗಳ ಅಭಾವದಿಂದ ಅವುಗಳಿಗೊಂದು ಕಳ್ಳಸಂತೆ ಕೂಡ ಸಿದ್ಧವಾಯಿತು. ನೋಡಿದಿರಾ ಬಿಟ್ಟಿಯ ಆಸೆ ಬೀರುವ ಪ್ರಭಾವ!

ಆದುದರಿಂದ ಬಿಟ್ಟಿ ಹೊಡೆಯುವ ಸ್ವಾತಂತ್ರ್ಯಕ್ಕೊಂದು ಅಡ್ಡಿ ಬರದಿದ್ದರೆ ಬೇರಾವ ಸ್ವಾತಂತ್ರ್ಯವು ಕೊಚ್ಚಿಕೊಂಡು ಹೋದರೂ ಸರಿಯೆ ಎನ್ನುವವರು ನಮ್ಮಲ್ಲಿ ಕಡಿಮೆಯಿಲ್ಲ.

ನೆರೆಯ ಹಾವಳಿಯಿಂದ ಲಕ್ಷಾಂತರ ಜನರ ಜೀವನಕ್ಕೆ ಅಲ್ಲಸಲ್ಲದ ವಿಘ್ನಗಳನ್ನು ತಂದೊಡ್ಡಿದ ವಿಘ್ನೇಶ್ವರನಿಗೆ ಈ ಸಲ ಬಿಟ್ಟಿ ಕಡುಬು ಕೊಡಲಾರೆ ಎಂದರು ಸಂತ್ರಸ್ತರಾದ ಮಿತ್ರರು. ನಿರ್ವಿಘ್ನತೆಯ ವರ ಕೊಡದೆ ಕೇವಲ ಬಿಟ್ಟಿ ಕಡುಬು ಹೊಡೆಯುವುದಕ್ಕಾಗಿಯೇ ಗಣಪ ಬರುತ್ತಿರುವಹಾಗಿದೆ ಎಂದು ಅವರ ಆಪಾದನೆ! ಆದರೆ ಈ ಕಾಲದಲ್ಲಿ ಜನರಂತೆ ದೇವರಲ್ಲವೆ!

—ರಾವಿ.

—:o:—

ಈಗಾಗಲೇ ಐದು ಗ್ರಹ ಸೇರಿವೆ!

——:೦:——

ಒಲುಮೆಯ ಒಡನಾಡಿಗಳೇ, ನಲುಮೆಯ ನೇಹಿಗರೇ, ಮೆಚ್ಚಿನ ಮಿತ್ರರೇ, ಕೆಚ್ಚೆದೆಯ ಕಾವ್ರೇಡರೇ, ಈಗಾಗಲೇ ಐದು ಗ್ರಹಗಳು ಕೂಡಿವೆ. ಮುಂದಿನ ಫೆಬ್ರವರಿಗೆ ಎಂಟುಗ್ರಹ ಕೂಡುವುದಕ್ಕೆ ಮೊದಲು, ಕಾರ್ತಿಕ ಮಾಸಕ್ಕೆ ನಾಲ್ಕುಗ್ರಹ ಒಂದೇ ರಾಶಿಯಲ್ಲಿ ಕೂಡುವುದೆಂದೇ ನಂಬಿದ್ದ ನಮಗೆ ಇದು ಭಾರೀ ಪೆಟ್ಟು. ರಾವಣನ ಮರಣ ಕಾಲಕ್ಕೆ ಎಂಟುಗ್ರಹ ಕೂಡಿದ್ದವಂತೆ. ಆದರೀಗ ರಾವಣರು ಡಜನ್‌ಗಟ್ಟಲೆ ಇದ್ದಾರೆ. ಎಂದ ಮೇಲೆ ಗ್ರಹಗಳಿಗೇ ಏನಾದರೂ ಆಗಬಹುದೆಂದು ನಾವು ನಕ್ಕು ಸುಮ್ಮನಾದೆವು. ಪ್ರಳಯವಾಗುತ್ತದೆ ಎಂದಾಗ ಇನ್ನೇನು ಪ್ರಳಯ ವಾದೀತು, ಮತ್ತೊಂದು ಹತ್ತು ಸಾವಿರಕೋಟಿ ತೆರಿಗೆ ಬಿದ್ದೀತು, ರಾಗಿ, ಜೋಳ, ಕಡ್ಲೆಬೇಳೆ ತೊಗರೀಬೇಳೆ ಬಿಲ್ಲಿಗೆಂಟು ಸೇರಾಗಬಹುದು, ದಲ್ಲಾಳಿ ವರ್ಷಕ್ಕೆ ಒಟ್ಟು ನಲವತ್ತೆಂಟು ಸಾವಿರದ ಬದಲು ನಾಲ್ಕುನೂರಾದೀತು, ಮುಂದಿನ ವರ್ಷ ವ್ಯಾಪಾರವನ್ನೇ ಬಿಟ್ಟರಾಯಿತು, ಈ ವರ್ಷ ದುಡಿದದ್ದೇ ಸಾಕು, ಒಂದಿಪ್ಪತ್ತು ಪಲ್ಲ ಅಕ್ಕಿ, ಬೇಳೆ, ಗೋಧಿ ಸ್ಟೋರ್ ಮಾಡಿದರಾಯಿತು, ಹೈಡ್ರೋಜನ್ ಬಾಂಬ್‌ನಿಂದ ರಕ್ಷಣೆ ಪಡೆಯಲು ನೆಲಮಾಳಿಗೆ ಮಾಡಿ ಐದಡಿ ದಪ್ಪ ಕಾಂಕ್ರೀಟ್ ಗೋಡೆ ಕಟ್ಟಿಕೊಂಡರಾಯಿತು ಎಂದಿದ್ದೆವು.

ನೆಚ್ಚಿನ ದೋಸ್ತರೇ, ಈಗ ಕುತ್ತಿಗೆಗೇ ಬಂತಲ್ಲಾ! ಒಂದಲ್ಲ ಎರಡು ಸುತ್ತು ಪ್ರವಾಹ ಎಲ್ಲಾ ನದಿಗಳಲ್ಲೂ ಹುಚ್ಚು ಹುಚ್ಚಾಗಿ ಏರಿ ಅಣೆಕಟ್ಟುಗಳು ಬಿರುಕು ಬಿಟ್ಟು, ಊರುಗಳು ಸ್ಮಶಾನಗಳಾಗಿ, ಹೊಲ ಗದ್ದೆಗಳೆಲ್ಲಾ ಕೊಳೆತು, ಮನೆಗಳೆಲ್ಲಾ ಮುರಿದುಬಿದ್ದು, ಜನಗಳು ದನಗಳು ಕಂಗಾಲುಗೆಟ್ಟು, ಕೇಳಿದವರೆದೆ ಝಲ್ಲೆಂದು, ಹೇಳುವವರು ಕಣ್ಣೀರು ಕರೆದು, ಕಂಬನಿ ಹರಿದು, ಉತ್ಸಾಹ ಮುರಿದು ಎಲ್ಲೆಲ್ಲೂ ನಿಡುಸುಯಿಲು ಕೇಳಿಬಂದಾಗ ಇನ್ನೂ ನಾಲ್ಕು ಗ್ರಹಗಳೂ ಕೂಡಿರಲಿಲ್ಲ ಪ್ರಕೃತಿಯ ಕೋಪ, ಪಂಚಭೂತಗಳಲ್ಲಿ ಒಂದಾದ ನೀರಿನ ಮೂಲಕ ಹಾದೋ ಅಲ್ಲವೋ ಎಂದು ಕಾಣಿಸಿದಾಗಲೇ ಇಷ್ಟು ಅನಾಹುತವಾಯಿತು; ಮುಂದೇನೋ ಎಂತೋ? ಧರ್ಮಕಾರ್ಯಗಳನ್ನಾದರೂ ಮಾಡೋಣ ಎಂದುಕೊಂಡೆವು. ಮಾಡಲಿಲ್ಲ ಅಷ್ಟೇ.

ನಂಬುಗೆಯ ಗೆಳೆಯರೇ, ಕಾವೇರಿ, ಹೇಮಾವತಿ, ಕಪಿನಿ ಲಕ್ಷ್ಮಣತೀರ್ಥ (ಒಟ್ಟು ನಾಲ್ಕು) ನದಿಗಳು ಅಷ್ಟೆಲ್ಲಾ ಹಾವಳಿ ನಡೆಸಿದುದರಿಂದ ಜೋಳ, ರಾಗಿ ರೇಟು ವಾರಕ್ಕೆ ಆರು ರೂಪಾಯಿ ಏರಿತೆಂದು ನೀವು ತಿಳಿದಿರಬಹುದು. ಆ ವಾರ ಏನಿಲ್ಲಾ ಎಂದರೆ ನರಸೀಪುರ, ಗರ್ಗೇಶ್ವರಿ, ಮೈಸೂರುಗಳಿಗೆ ಹತ್ತು ಹದಿನೆಂಟು ಲೋಡು ಜೋಳ, ಬೆಂಗಳೂರಿಗೆ ಹತ್ತಿಪ್ಪತ್ತು ಲೋಡು ರಾಗಿ ಕಳಿಸಿದೆವು. ಲೋಡಿಗೆ ಅರವತ್ತು ರೂಪಾಯಿ ದಲ್ಲಾಳಿಯಂತೆ ಮೂವತ್ತು ನಲವತ್ತು ಲೋಡಿಗೆ ಏನಿಲ್ಲಾ ಎಂದರೆ ಎರಡೆರಡೂವರೆ ಸಾವಿರ ದುಡಿಮೆ ಆಯ್ತು. ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿ ತೇಜಿಮಂದಿ ವ್ಯಾಪಾರಮಾಡಿದವರಿಗೇ ಅಷ್ಟು ದುಡಿಮೆಯಿಲ್ಲ ಎಂದಮೇಲೆ ನಾವು ನಶೀಬುದಾರರಲ್ಲವೇ ?

ಆದರದು ಹಾಗೆ ಮುಂದುವರಿಯಲಿಲ್ಲವಯ್ಯಾ ಸ್ನೇಹಿತರಿರಾ. ಪ್ರವಾಹ ದಿಂದ ಜನತೆಗೆ ನೀವು ತಿಳಿದಷ್ಟು ತೊಂದರೆ ಆಗಲಿಲ್ಲವಯ್ಯಾ ಬಾಂಧವರಿರಾ. ಜೋಳ ರಾಗಿ ರೇಟು ಮೈಸೂರಲ್ಲಿ 44 ರೂ. ಇದ್ದದ್ದು 38 ಕ್ಕೆ ಕೇಳುವರಿಲ್ಲದ ಹಾಗಾಯಿತಯ್ಯಾ. ಹೊಸ ಜೋಳ ಅಲ್ಲೇ ಬಂತು. ನುಸಿ ಜೋಳ ಬಿಜಾಪುರ ದಿಂದ ಬಂತು. ಅಷ್ಟರಲ್ಲಾಗಲೇ ನಮಗೆ 30, 40 ಲೋಡಿನ ದುಡ್ಡಿನ ಪೈಕಿ 26, 36 ಲೋಡಿನ ದುಡ್ಡು ಬಂದುಬಿಟ್ಟಿತ್ತು. ಒಳ್ಳೆ ಶುಕ್ರವಾರ ಅಮಾವಾಸ್ಯೆ ರಾಹುಕಾಲದಲ್ಲಿ ಪೋಸ್ಟು ಬಂದಾಗ ನಮಗೆ ನಾಲ್ಕು ಗ್ರಹಗಳ ಕೂಟಸೇರಿದೆ ಎಂದು ತಿಳಿದು ಬಂತು.

ಆ ಮಹಾನೀಚ, ಹಲ್....ಹೋಗಲಿ, ಅವನನ್ನು ಬೈದರೆ ನಿಮಗೆ ಕವಡಾದೀತು. ಅವನು ಬರೆದ ಕಾಗದ ಓದಿ.

ಮುಗಿಲುಹಳ್ಳಿ ಪರಮೇಶಪ್ಪನವರಿಗೆ ಶ|ಗಳು.

ನಿಮ್ಮ ಕಾಗದ ಬಂತು. ಜೋಳದ ಲಾರಿ ಬಂತು. ಎಲ್ಲಾ ಬಿಟ್ಟು ನಮಗೇಕೆ ಜೋಳ ಕಳಿಸಿದಿರಿ. ಏನೂ ತಿಳಿಯಲಿಲ್ಲ ಮೈಸೂರಿನಲ್ಲಿ ಜೋಳ ಖರ್ಚಿಲ್ಲ. ನಿಮಗೆ ಆರ್ಡರುಕೊಟ್ಟಿಲ್ಲ. ನಾವು ಜವಾಬ್ದಾರರಲ್ಲ. ಲಾರಿ ಹಿಂದಕ್ಕೆ ಕಳಿಸಿದ್ದೇವೆ.

ಇಂತಿ ಶರಣಾರ್ತಿ
ಕೆ. ಬಸಣ್ಣ

ಅವರಪ್ಪ ಸರಿಯಾಗಿಯೇ ಇನಿಷಲ್ಸ್ ಇಟ್ಟಿದ್ದಾನೆ. ಕೆ ಎಂದರೆ ಕದೀಮ, ಕಳ್ಳ. ಇವನು ನಾಲ್ಕುಸಾರಿ ಟೆಲಿಫೋನ್ ಮಾಡಿದ್ದ. ನಾವು ಇವನಾರೋ ಹೊಸಬ. ಪರಿಚಯವಿಲ್ಲದವನು ಎಂದುಕೊಂಡಿದ್ದರೆ ‘ ಸ್ವಾಮಿ, ಲಿಂಗಣ್ಣನವರಿಗೆ ನನ್ನ ಪರಿಚಯ ಇದೆ. ಅವರಿಗೆ ಲಾರಿಕಳಿಸಿ ದುಡ್ಡುಕೊಟ್ಟು ಮಾಲು ಡೆಲಿವರಿ ತೆಗೆದುಕೊಳ್ಳುತ್ತೇನೆ’ ಎಂದು ಫೋನಿನಲ್ಲಿ ಹೇಳಿದ್ದ. ಅವನು ವಾಪಸ್ ಕಳಿಸಿದ ಲಾರಿ ಎಲ್ಲಿಗೆ ಹೋಯಿತೋ ಏನೋ ಪತ್ತೆಯಿಲ್ಲ. ಇವನಿಗೆ ಗ್ಯಾರಂಟಿ ಕೊಟ್ಟ

ಲಿಂಗಣ್ಣ ಯಾವ ದೊಡ್ಡ ಮನುಷ್ಯನೆಂದು ಅವನ ಈ ಕಾಗದ ನೋಡಿದರೆ ನಿಮಗೇ ತಿಳಿಯುತ್ತದೆ.

M. P. ಇವರಿಗೆ ಶರಣಾರ್ತಿಗಳು,

ನಿಮ್ಮ ಪತ್ರ ಬಂತು. ನೀವು ಕಳಿಸಿದ ಜೋಳ ಅಳ್ತೆ ಬಹಳ ಕಡಿಮೆ ಬರುತ್ತೆ. 95 ಸೇರು ಭರ್ತಿ ಹಾಕಲು ತಿಳಿಸಿದ್ದೆವು. 88 ಸೇರು ಅಳ್ತೆ ಬರುತ್ತದೆ. ನಿಮ್ಮ ಜೊತೆಗೆ ವ್ಯಾಪಾರ ಮಾಡುವುದು ಹೇಗೋ ಏನೋ ತಿಳಿಯದು. ನಮ್ಮ ಚಿರಂಜೀವಿ ದ್ಯಾಮಣ್ಣನಿಗೆ ನಿಮ್ಮ ಜೊತೆ ವ್ಯಾಪಾರ ಮಾಡಬೇಡ ಎಂದು ಎಷ್ಟೇ ಬಾರಿ ಹೇಳಿದರೂ ಕೇಳುವುದಿಲ್ಲ. ನೀವು ಕಳಿಸಿರುವ ಮಾಲು ನಿಮ್ಮದಾಗಿಯೇ ಇಟ್ಟಿದ್ದೇವೆ. ಬಜಾರು ದರಕ್ಕೆ ಮಾರುತ್ತೇವೆ. ಕೆ. ಬಸಣ್ಣನವರಿಗೆ ನೀವು ಕಳಿಸಿದ ಲೋಡು ವಾಪಸ್ ಹೋಗಿರುತ್ತೆ ತಿಳಿಯಿರಿ.

ಇ + ಶ | ಗಳು

ಲಿಂಗಣ್ಣ

ಏ. ಬಿ. ನೀವು ಇಂಥಾ ವ್ಯಾಪಾರ ಏಕೆ ಮಾಡುತ್ತೀರೋ ತಿಳಿಯದು. ನಮ್ಮ ಚಿರಂಜೀವಿ ಸಹಾ ಇನ್ನುಮೇಲೆ ನಿಮ್ಮ ವ್ಯಾಪಾರ ಬೇಡವೆನುತ್ತಾನೆ. ನಿಮಗೆ ಆರ್ಡರ್ ಕೊಡದೆ ನೀವು ಮಾಲನ್ನು ಏಕೆ ಕಳಿಸಿದಿರಿ. ಕಾಮ್ರೇಡರೇ, ಕೇಳಿದಿರಾ? ನಾವು ಈ ಲಿಂಗಣ್ಣನಿಗೆ ಕಳಿಸಿದ ಮಾಲು ಅವರ ಚಿರಂಜೀವಿ ಇಲ್ಲಿಗೆ ಮುಖ್ತಾ ಬಂದಾಗ, ಅವರ ಆರ್ಡರ್ ಪ್ರಕಾರ, ಅವರೆದುರಿಗೇ ಖರೀದಿ ಮಾಡಿದ್ದು. "ಬಸಿ ಜಲ್ದಿ ಜಲ್ದಿ ಕರೀದಿ ಮಾಡ್ಬುಡಿ. ಸಂತೆ ಒತ್ತಿಗೆ ತುಂಬಿದ್ರಂತೆ. ನಮ್ಮಣ್ಣಾವ್ರು ಯೋಳೆವ್ರೆ" ಎಂದು ಆ ಚಿರಂಜೀವಿ ಹೇಳಿತ್ತು. "ಬುದ್ದೆವ್ರೆ, ಇಡೀ ಇಸ್ಟೇಟಿನಾಗೆ ನಿಮ್ಮಂಗ್ಡಿ ಅಮಾಲ್ರು ಅಳ್ತೆ ಶಾನೇವೇ ಕರೆಕ್ಟ್ ಇರ್‍ತೈತೆ" ಎಂದು ಆ ಚಿರಂಜೀವಿ ನಮ್ಮಲ್ಲಿಗೆ ಬಂದಾಗಲೆಲ್ಲಾ ತಾರೀಫು ಮಾಡುತ್ತಿತ್ತು.

ಈ ಲಿಂಗಣ್ಣ ಒಂದು ಐದು ಪೈಸ್ ಕಾರ್ಡು ಬರೆದು ಸೈನುಮಾಡದೆ ಪೋಸ್ಟ್ ಮಾಡಿದರೂ ನಾವು ಹತ್ತು ಸಾವಿರ ರೂಪಾಯಿ ಮಾಲು ಕಳಿಸುತ್ತೇವೆ!

ಇನ್ನು ಮೂರನೇ ಕಾರ್ಡು ನೋಡ್ರೀ.

ನಮಸ್ಕಾರಗಳು,

ಒಂದುವಾರದ ಹಿಂದೆ ನಿಮಗೆ ರಾಗೀ ಕಳಿಸಲು ಹೇಳಿದ್ದು ಸರಿಯಷ್ಟೇ ರಾಗಿ ಈ ದಿವಸ ಬಂತು. ಬರೇ ಮಣ್ಣು ಇದೆಯೇ ಹೊರತು ರಾಗಿ ಕಾಣಿಸಲಿಲ್ಲ. ಚೀಲಕ್ಕೆ 8 ರೂ. ಬಿಟ್ಟುಕೊಟ್ಟರೆ ನಮಗಿದು ಬೇಕು.

ಇಂತಿ ಶರಣಾರ್ತಿಗಳು

ಟಿ. ರಂಗಯ್ಯ

ಕಂಡಿರಾ ಈ ಟಿ. ರಂಗಯ್ಯನ ತಕರಾರು. ಹೊಟ್ಟೆ ಉರಿಯುತ್ತೆ ಈ ಕಾಗದ ನೋಡಿ. ಅವನಿಗೆ ಕಳಿಸಿದ ರಾಗಿ ಚಿನ್ನದಂಥ ಮಾಲು ಕೈ ತೊಳೆದುಕೊಂಡು ಮುಟ್ಟಬೇಕು. ಅಂಥ ಮಾಲನ್ನು ಅವನೂ ಕಾಣ ಅವನಪ್ಪನೂ ಕಾಣ. ನಮಗೆ ಸಿಗುವುದು ಚೀಲಕ್ಕೆ ನಾಲ್ಕಾಣೆ ದಲಾಲಿ. ಇವನಿಗೆ ಎಂಟು ರೂಪಾಯಿ ಬಿಟ್ಟು ಕೊಟ್ಟರೆ ನಮ್ಮ ಮನೆ ದೀಪ ಉಳಿದೀತೇ ?

ನಾಲ್ಕನೆಯ ಕಾಗದ ಬರೆದವನು ಇವರೆಲ್ಲರಿಗಿಂತ ಪರಮನೀಚ

ನಮಸ್ಕಾರಗಳು.

ನೀವು ಕೊಳ್ಳೇಗಾಲಕ್ಕೆ ಜೋಳ ಕಳಿಸಿದ್ದು ಸರಿತಾನೇ ಅದು ತಪ್ಪಿ ನಮ್ಮ ಊರಿಗೆ ಬಂತು. ನಿಮಗೆ ಲುಕ್ಸಾನಾಗಬಾರದೆಂದು 35 ರೂಗೆ ಮೂಟೆ ಒಂದರಂತೆ ಮಾರಿದ್ದೇನೆ. ನಿಮ್ಮ ಮಾಲು ಕೊಂಡವರು ಚೀಲಕ್ಕೆ 4, 5 ಸೇರು ಅಳ್ತೆ ಕಡ್ಮೆ ಬರುತ್ತದೆಂದು ತಕರಾರು ಮಾಡುತ್ತಿದ್ದಾರೆ. ಇಲ್ಲಿ ಹೊಸ ಜೋಳ 25 ರೂ. 30 ರೂಗೆ ಪಲ್ಲ ಸಿಗುತ್ತದೆ. ಕೂಡಲೇ ಅವರಿಗೆಲ್ಲ ಅಳ್ತೆ ಕಡಿಮೆ ಆದದ್ದಕ್ಕೆ ಲುಕ್ಸಾನು ತುಂಬಿಕೊಡ್ರೀ. ಪತ್ರ ಬರೆಯಿರಿ.

ಇ । ಶ । ಗಳು

ಬೋರೇ ಗೌಡ

ಈ ನೀಚ ಎಂಟು ದಿವಸ ನಮ್ಮೂರಿನಲ್ಲಿದ್ದು ಮಾಲು ಖರೀದಿಮಾಡಿ ಊರಿಗೆ ಒಯ್ದು ಒಂದೇ ವಾರದಲ್ಲಿ ದುಡ್ಡು ಕಳಿಸುತ್ತೇನೆ ಎಂದು ದೇವರಾಣೆ ಹಾವರಾಣೆ ಮಾಡಿ ಮಾಲು ಒಯ್ದವನು ತಿಳಿಯಿತೇ !

ಎಂಟು ಗ್ರಹ ಒಂದೇ ಮನೆಯಲ್ಲಿ ಸೇರಿದರೆ ಯಾರಿಗೆ ಏನಾದರೂ ಸಹಾ ಗುರುಬಲ ಇರುವವರಿಗೆ, ಧರ್ಮಿಷ್ಟರಿಗೆ ಏನೂ ಆಗುವುದಿಲ್ಲವೆಂದು ಜಗದ್ಗುರುಗಳು ಅಪ್ಪಣೆ ಕೊಡಿಸಿದ್ದಾರೆ. ಅಲ್ಲಿ ಬಚಾವಾಗುವ ಕುಳಗಳುಕೂಡಾ ಈ ನಾಲ್ಕು ಗ್ರಹಗಳಿಗೆ ಸಿಕ್ಕರೆ ಉಳಿದಾರೋ ಇಲ್ಲವೋ ಅನುಮಾನ. ನಮ್ಮ ಬಂಡವಾಳವೇ ಭಾರೀ ಎಂದರೆ ಎಂಟುಸಾವಿರ ರೂ. ಇವರಿಗೇ ಹದಿನಾರು ಸಾವಿರ ಚಿಲ್ಲರೆ ಮಾಲು, ಇವರ ಮುಸುಣಿ ನೋಡಿ, ಕಾರ್ಡು ಓದಿ, ಫೋನ್ ಕೇಳಿ ಕಳಿಸಿ ಸಿಕ್ಕುಬಿದ್ದ ನಮ್ಮನ್ನು ಕಾಪಾಡಲು ಧರ್ಮಕ್ಕೆ ಸಾಧ್ಯವಿಲ್ಲ ಎಂದೇ ತೀರ್ಮಾನಿಸಿದೆವು. ಇವರಿಗೆ ಏನು ಉತ್ತರ ಬರೆಯಬೇಕು ? ಈ ಭಂಡರಿಗೆ ಏನು ಮಾಡಬೇಕು ?

ಲಾಯರ್ ನೋಟೀಸು ಕೊಡಿಸೋಣವೇ ? ಅವನಿಗೆ ಬೇರೆ ದಂಡ ತೆರಬೇಕು. ಇನ್ನು ಹತ್ತು ವರ್ಷವಾದಮೇಲೆ ಗಂಟು ಕೈಗೆ ಎಂಟಾಣೆಯಾಗಿ ಬರುತ್ತದೆ. ಅಪ್ಪಾ ಅಣ್ಣಾ ಎಂದರೆ ಈ ಕಟುಕರ ಮನಸ್ಸು ಕರಗೀತೇ ? ನಾವು ಕಳಿಸಿದ ಲಾರಿಯನ್ನು ಹಿಂದಕ್ಕೆ ಕಳಿಸಿದೆ ಎಂದನಲ್ಲಾ, ಎಲ್ಲಿಗೆ ಕಳಿಸಿದ ? ಹದಿನಾರು ಸಾವಿರ !

ಕಾಫಿಗೆ ಕಾಸಿಲ್ಲದ ನಮ್ಮೆಲ್ಲ ದೋಸ್ತರೇ, ನಿಮಗಾದರೂ ಆ ದುಡ್ಡು ಹಂಚಿದ್ದರೆ ಸತ್ಪಾತ್ರದಲ್ಲಿ ದಾನವಾಗುತ್ತಿತ್ತು.

'ಲೇ ರಾಯಾ' ಎಂದ ನನ್ನ ಧಣಿ 'ಕಾಗದ ಬರೆಯೋ. ಗಂಟು ನೀಗಲಿಟ್ವೆ ಹಾಗಲ್ಲ'. 'ಆಗ್ಲೀ ನನ ಸೌಕಾರಾ' ಎಂದೆ. ನಾನೂ ಏನು ಕಡಿಮೆ ತಲೆಯುವನಲ್ಲ (ಹೋಗಲಿ, ಆತ್ಮ ಪ್ರಶಂಶೆ ಬೇಡ) ನಾಲ್ಕಕ್ಕೂ ಒಂದೇ ಉತ್ತರ.

ಸದ್ರಿಯವರಿಗೆ ಸದ್ರೀಯವರು ಮಾಡುವ ಶರಣಾರ್ತಿಗಳು.

ನಿಮ್ಮ ಕಾಗದ ಬಂತು. ನಮಗೆ ದುಡ್ಡಿನ ಅಡಚಣೆ ಬಹಳ ಇದೆ. ಕೂಡಲೇ ಹಣ ಕಳ್ಸಿಕೊಡ್ರೀ.

ಮತ್ತು ನೀವು ಇಲ್ಲಿಗೆ ಮುಖ್ತಾ ಬಂದದ್ದಾದೆರೆ ಕ್ವಾಲಿಟಿ ಡಿಫರೆನ್ಸ್, ಅಳ್ತಿ ಕಮ್ಮಿ ಏನಾದರೂ ಇದ್ದ ಪಕ್ಷದಲ್ಲಿ ಏನಾದರೂ ಮಾಡಬಹುದು.

ನಾಳಿಗೇ ಹಣ ಕಳ್ಸಿರಿ. ಕೂಡ್ಲೇ ಮುಖ್ತಾ ಬರ್ರೀ.

ಇ | ಶ | ಗಳು

....

ನಮ್ಮ ಧಣಿಗಳು ಕಾಗದವನ್ನೋದಿ ಗಾಬರಿಯಾದರು. 'ಏನು ಮಾಡುತ್ತೀ, ಅವರು ಮುಖ್ತಾ ಬಂದರೆ. ನಿಮ್ಮಪ್ಪನಮನೆ ಗಂಟು ಕರಗಸ್ತಿಯಾ' ಎಂದರು.

'ನನ್ ದುಡ್ಡಲ್ಲ ಸೌಕಾರ, ನಿನ್ದುಡ್ಡು. ನಾನ್ಹೆಂಗೆ ಕೊಡಕ್ಬರ್ತದೇ, ಮುಖ್ತಾ ಬರ್ಲೀ. ಏನಾರ ಮಾಡ್ತಿವೀ ಅಂತ ಬರ್ದೆ. ಏನು ದುಡ್ಡುಕೊಡ್ತಿವೀ ಅಂತ ಬರ್ದದಿನೇ?' ಎಂದೆ.

ಧಣಿಯು ಕಣ್ಣು ಮಿಂಚಿತು. ಕೀಚಕನನ್ನು ನಾಟ್ಯಗೃಹಕ್ಕೆ ಬರಲು ಹೇಳಿದೇನೆ ಎಂದು ದ್ರೌಪದಿ ಭೀಮನಿಗೆ ಹೇಳಿದಾಗ ಭೀಮನ ಕಣ್ಣಲ್ಲಿ ಕಾಣಿಸಿದ ಹೊಳವು ಅಲ್ಲಿ ಮಿನುಗಿತು. ಅಂಗಡಿ ಹಿಂದೆ ಗೋಡೌನುಗಳು ಬೇಕಾದಷ್ಟಿವೆ. ಅಲ್ಲಿ ಈ ಮಂದಿಕೂಡಿಕೊಳ್ಳಲು ಹಮಾಲರು ಮುಸ್ತಾಗಿದ್ದಾರೆ.

ಮಿತ್ರರೇ, ಹೇಳಿದೆನಲ್ಲಾ, ಇದು ಧರ್ಮಕ್ಕೆ ಕಾಲವಲ್ಲ ಇಷ್ಟು ಹೊತ್ತಿಗೆ ಅಂಗಡಿಗೆ ಕರಿಬಸ್ಯ ಬಂದ. ಈ ನಂಬಿಕಸ್ಥರಿಗೆ ಕಳಿಸಿದ ಜೋಳ, ರಾಗಿಯನ್ನು ಇವನೇ ನಮಗೆ ಮಾರಿದವನು.

'ಸೌಕಾರಾ, ದುಡ್ಕೊಡಪ್ಪ ಭಾಳದಿನಾತು' ಎಂದ ಕರಿಬಸ್ಯ.

'ಇವತ್ತು ಬಟವಾಡೆ ಇಲ್ಲ' ಎಂದ ನನ್ನ ಧಣಿ.

'ಗಂಟು ಪುಗ್ಸಟಿದಲ್ಲೋ ಸೌಕಾರಾ' ಎಂದ ಕರಿಬಸ್ಯ.

'ಇವತ್ತೊಂದು ಬಿಲ್ಲಿಸತಿಗೂ ಇಲ್ಲ' ಎಂದ ನನ್ನ ಧಣಿ.

‘ ಅವೆಲ್ಲ ಆಗದಿಲ್ಲಪ, ಮರ್ರ್ಯಾದೆಯಿಂದ ದುಡ್ಡು ಬಡದ್ಬಿಡು ’

‘ ಇವತ್ತೊಂದು ದಂಡಿನೂಸಿಗಲ್ಲ ಮರ್ರ್ಯಾದೆಯಿಂದ ಎದ್ಹೋಗು ’

‘ ನಾನ್ಹೇಳಲ್ಲಪ್ಪ, ಇದೆಂಥ ಯವಹಾರನೋ ಕೊಡದುಡ್ಡು ಕೊಡುಅಂದ್ರೆ....’

‘ ನಾನ್ಹೇಳಿದ್ನೆಲ್ಲಪ್ಪ, ನೀನ್ಕೊಟ್ಟ ದರಿದ್ರಮಾಲಿಂದು ಒಂದು ಬಿಲ್ಲೀನೂ ಬಂದಿಲ್ಲ. ಮಣ್ಣು, ಕಡ್ಮೆ ಅಳ್ತಿ ದುಡ್ಡು ಬಿಟ್ಕೊಡು. ನಾವು ಆಸಾಮಿಗಳಿಗೆ ಅದನ್ಕೊಟ್ಟು ದುಡ್ಡು ತಂದ್ಕೊಡ್ತಿವಿ.’

‘ ನನ್ಗೇನು ತಿಸೇನೋ ’ ಎಂದ ಕರಿಬಸ್ಯ.

‘ ಮತ್ತೆನನಗೇನು ? ’ ಎಂದ ಧಣಿ. ಒಂದೆಂಟಾಣೆ ಎಸೆದ. ಹಮಾಲರಿಂದ ಒಂದೈದು ಸಿಗರೇಟು ತರಿಸಿದ. ಕರಿಬಸ್ಯನಿಗೆ ನನಗೆ ಒಂದೊಂದು ಕೊಟ್ಟ. ತಾನೊಂದು ಹೊತ್ತಿಸಿದ.

‘ ಬಜಾರ್ ಸತ್ಹೋಗೆತೆ ಒಂದ್ಬಿಲ್ಲಿ ಯಾಪಾರಿಲ್ಲ ’ ಎಂದ.

‘ ಹಿಂಗ್ಮಳೆ ಹಿಡ್ಕಂಡ್ರೆ ಇನ್ನೇನಾದೀತು ಎಂದೆ ನಾನು.

‘ ಪೂನಾದಗೆ ಮೂರ್ಸಾವ್ರ ಜನ ಸತ್ರಂತೇ ’ ಎಂದ ಕರಿಬಸ್ಯ.

‘ ಮಲೆನಾಡ್ನೆಗೆ ಏನಾಗೆತೋ ಏನೋ ? ’ ಎಂದ ಧಣಿ.

‘ ಫೆಬ್ರವರಿಗೆ ಎಂಟು ಗ್ರಹ ಸೇರ್ತವಂತೆ ಏನೇನಾಕ್ಕತೋ ಏನೋ ? ’ ಎಂದ ಕರಿಬಸ್ಯ.

‘ ಎಲ್ಲಾ ನಾಶಾಗಿ ಹೋಕ್ಕತೇಳು. ಈಗ್ಲೇ ಏನ್ರ, ಗ್ರಹಗಳು ಕೂಡೆದವೋ ಏನೋ ! ’ ಎಂದ ಧಣಿ.

‘ ಏನೋ ರಾಯಾ ಗ್ರಹ ಕೂಡೆದವೇನೋ ? ’ ಎಂದ ಕರಿಬಸ್ಯ.

‘ ಹೂಂ, ಕೂಡೆದವೆ ! ’ ಎಂದೆ ನಾನು.

‘ ಯೋಸು ? ’ ಎಂದ ಧಣಿ.

‘ ನಾಕು ಅಂತಿದ್ರಪ್ಪ ’ ಎಂದ ಕರಿಬಸ್ಯ.

‘ ನಾಕಲ್ಲ, ಐದು ’ ಎಂದೆ ನಾನು.

‘ ಯಾವ್ಯಾವು ! ’ ಎಂದ ಧಣಿ ‘ ಯಾವಲೇ ’ ಎಂದ ಕರಿಬಸ್ಯ.

‘ ಬಸಣ್ಣ, ಲಿಂಗಣ್ಣ, ರಂಗಯ್ಯ, ಬೋರೇಗೌಡ ’ ಧಣಿ ಹಾದು, ಹಾದು ಎನ್ನುತ್ತಿದ್ದವನು ‘ ಐದ್ನೇದು ? ’ ಎಂದ.

‘ ಕರಿಬಸ್ಯ ! ’ ಎಂದೆ.

ಗಾಳಿ, ಮಳೆ ಜೋರಾಗಿತ್ತು. ನಾನೂ ಧಣಿಗಳೂ ಕರಿಬಸ್ಯನೂ ಸಿಗರೇಟು ಸೇದುತ್ತಾ ಕುಳಿತೆವು.

—ಅ. ರಾ. ಸೇ.

ನವೀನ ಗಾದೆಗಳು

ಬರ್ಲಿನ್ ಗಡಿಬಿಡಿ

ಒಂದಲ್ಲಾ ಬರ್ಲಿನ್ಗೆ-ಸಂದಿಲ್ಲಾ ಮುಳ್ತಂತಿ!

* * * *

ಇತ್ತಲು ಬಂತು, ಸುತ್ತಲು ಬಂತು,
ಪಶ್ಚಿಮ ಬರ್ಲಿನ್ ಪ್ರಾಣಕ್ಕೆ ಬಂತು.

* * * *

ಹೊತ್ತಲ್ಲದ ಹೊತ್ತಲ್ಲಿ,
ಬತ್ತೀನ ಹತ್ತಿಸಿಟ್ಟರು!

* * * *

ಟೈಟೋವ್ ಅಲ್ಲಿ ಹಾರಾಡ್ದಾ ಅಂತ
ಷೆಪರ್ಡ್ ಇಲ್ಲಿ ನೆಗೆದು ಬಿದ್ದ.

* * * *

ಹಣ ಕೂಡಿದರೆ ಹಳ್ಳ
ದನಿ ಕೂಡಿಸಿದರೆ ತೋಳ

* * * *

ಯಾಕೋ ಬರ್ಲಿನ್ ತಾರಾಟ! ಎಂದರೆ
ಮೂಡಲ ಪಡುವಲ ದೆವ್ವದಾಟ! ಅಂದರಂತೆ

* * * *

ಕುಲಕ್ಕಂಜಿದವರ ತಪ್ಪು,
ಕುಲಕ್ಕಂಜಿದವರಿಗೆ ಒಪ್ಪೇ!

* * * *

ಇರುಳು ಕಂಡ ಹಾದೀಲಿ,
ಹಗಲಲ್ಲಿ ಅವಿತುಕೊಳ್ಳಬೇಕು!

* * * *

ಹೊಸಿಲ ಕೆಳಗೆ ಒಬ್ಬ ನುಸುಳಿದರೆ
ಬೇಲಿ ತಳಗೇ ಒಬ್ಬ ಹೊರಳಿದನಂತೆ

* * * *

ಎತ್ತು ಏರೋಪ್ಲೇನಿಗೆ ಎಳೀತು
ಕೋಣ ರೈಲನ್ನೇ ನಿಲ್ಲಿಸಿತು.

* * * *

ಇಳಿಯಾ ಮುಳುಗಿದವರಿಗೆ
ಬಾಳೇನು? ಗೋಳೇನು?

“ನಂಜುಂಡನ”

[ವಿ. ಡೋಂಟ್ ಸೀ: ಅವರಿಗೆ ನಮಸ್ಕರಿಸಿ]

[ಸ್ವರ್ಗದೊಳಗೀ ಸ್ನೇಹ ದೊರೆವುದೇನು ಎಂದು ವಿ. ಸೀ. ಹಾಡಿದರು. ಆದರೆ ಸ್ನೇಹಿತರು ಅರಿಯುವರಿತು ಮೋಸಮಾಡುವುದೇ ಸುಮಾರು ಜನರ ಅನುಭವ. ವಿ. ಸೀ. ಯವರು ಇಂತಹ ಅನುಭವಗಳನ್ನು “ವಿ. ಡೋಂಟ್ ಸಿ” ಎಂದು ಮರೆಮಾಡುತ್ತಾರೇನೋ?]

ನರಕದೊಳಗಿಂತ ಬೇನೆ ಇರುವುದೇನು?
ಕರುಳು ಹರಿಯುವ ನೆಂಟರಿರುವರೇನು?
ಮರುಳು ಮಾತುಗಳಾಡಿ ಎದೆಯುಸೆಳೆದು
ಕೊರಳ ಕುಯ್ಯುವ ಮಿತ್ರರಿರುವರೇನು ॥ ೧ ॥

* * * *

“ನನ್ನ ಮಗನನು ಕಳುಹಿಸಿರುವೆನು ಮಿತ್ರ!
ಮನಕೆ ಮುಂದಾರಿ ಕಾಣದೆಲೆ; ಎದೆಯ ಛಿದ್ರ!
ನಿನ್ನ ಮಗನಂತೆಯೇ ಕಾಣುವೆಯು ಅವನ
ನಮ್ಮ ಗೆಳೆತನದೊಲವು ಜನ್ಮ ಜನ್ಮದ ಋಣವು!” ॥ ೨ ॥

ಎದೆಯ ಮೀಂಟುವ ಈ ನುಡಿಗಳನೋದಿ
ಬಿದಿಯಮಾಟವ ಕಾಣಲಾರದ ಪಾಪಿ
ಒದ್ದಾಡಿಬೇಡಿ ಹಣವನವರಿಗಿತ್ತ
ಮುದ್ದುಕುವರಗೆ ನೆಲೆತೋರಿ ಸಂತಸಪಟ್ಟ ॥ ೩ ॥

ಮೂರುಸಾವಿರ. ತೆತ್ತ ಮೂರುವರ್ಷವು ದುಡಿದು
ಆರಡಿಯ ಎತ್ತರವ ಮಾರ್ಗಣು ಮಾಡಿಟ್ಟು
ಎರಡಾಣೆ ಮೂರಾಣೆ ದುಡಿಮೆಗೆಂದಿಸುಕೊಂಡು
ಕೊರಳು ಬಿಗಿದರೂ ಕಸಿದು ಕೊಡಿಟ್ಟ ಹಣವನ್ನು ॥ ೪ ॥

ನಗುತ ತೆತ್ತನಾ ಪಾಪಿ ಗೆಳೆಯನಾ ಮಗನಿಂಗೆ
ಬಿಗುಮಾನ ತುಂಬಿತ್ತು, ಓಡುತ್ತ ಗೆಳೆಯಬಂದು
ಬೇಗ ಹಣವನು ಸಲಿಸಿ ಒಲುಮೆ ಋಣವನೆಂ
ದಿಗಾದರು ತೀರಿಸಲು ಸಾಧ್ಯ? ಎಂದೆನುವನೆಂದು ॥ ೫ ॥

ಕಪ್ಪು ಮೌನವೇ ಕಾದಿತ್ತು ಪಾಪಿಯನುಭವಕೆ
ನೆನ್ಪುಕೊಟ್ಟನು ಕೊನೆಗೆ ಮಿತ್ರನೆಂದವನಿಂಗೆ
ಟೈಪೊತ್ತಿದಾ ಪತ್ರ ಬಂದಿತ್ತು ಉತ್ತರಿಸಿ
ಪಾಪಿ! ಏನಗೈದೆ! ಅಣ್ಣ! ಬಳಿದ ಸುಣ್ಣನಮ್ಮನೆಗೆ || ೬ ||

* * * *

ನಂಜುಂಡ ನೆಂದೆಂಬ ಕನಸಿತ್ತು ಪಾಪಿಗೆ
ನಂಜು ಉಂಡವ ಪಾಪಿ ಎಂದೀಗ ಅರಿವಾಯ್ತು
ಮುಂಜಿ ಮದುವೆಯ ಮಂತ್ರ ಸಂಸ್ಕೃತವ ಕಲಿಸುವವ
ನಂಜುಬುರುಕನು ಮಗನು ಕಲಿಸಿದನು ಪಾಠ! || ೭ ||

" ಮಾಯವೇ ಸತ್ಯ! ಭ್ರಮೆಯೇ ಮಿತ್ರತ್ವ!!
ಅಯವರಿತು ಮೋಸ ಗೈಯುವುದೇ ಬಾಳ್ತತ್ವ!
ಮಾಯವೇ ಅರಿವಿನಾ ಮಾರ್ಗದ ಮೂಲ!
ಬೇಯುವುದೆ ಮಾನವನನೆತ್ತರಿಪ ಶೂಲ!! " || ೮ ||

ಇಲ್ಲಿರುವತನಕ ಇರಿಯುವುವು ನೆನಪುಗಳು
ಕೊಲ್ಲುತಾ ಹಿಸಿಯುವುವು ಪಾಪಿಗಳ ಮನವ
ಗೆಲ್ಲುತಾ ನರಕಕ್ಕೆ ಬೇಗ ಹೋದರೆ ಪಾಪಿ,
ಗಲ್ಲು ಶಿರಚ್ಛಿದ್ರ ಕಾಯ್ವೆಣ್ಣೆಗಳೆ ಹಿತವು!

ನರಕದೊಳಗಿಂತ ಬೇನೆ ಇರುವುದೇನು?
ಕರುಳು ಹರಿಯುವ ನೆಂಟರಿರುವರೇನು?
ಮರುಳು ಮಾತುಗಳಾಡಿ ಅರಿಯದೆ ಎದೆ ಇರಿವ
ಕೊರಳ ಕುಯ್ಯುವ ಮಿತ್ರರಿರುವರೇನು? || ೧೦ ||

* * * * *

ದಗಕೋರರಿರುವಲ್ಲಿ ಮಿತ್ರಂಹತರ ರಾಜ್ಯದಲಿ
ಸೊಗಸಿಹುದು ಅರಿವಿಹುದು ಬೇನೆ ನೋವಿನಲಿ
ಅಗಸೆಯಾ ಮರದಂತೆ ಪಾರಣೆಗೆ ಒಡಲಿತ್ತು
ಆಗಸದ ಕಡೆನೋಡೆ, ಮನಮರವು ಅಳಿದಿತ್ತು || ೧೧ ||

—ಪಾಪಿ.

"ಅಪಾಯ! ಎಚ್ಚರಿಕೆ!!" ಎಂಬ ಕೆಂಪು ತೂಗು ಹಲಗೆಯನ್ನು ರಿಪೇರಿಯಾಗುತ್ತಿದ್ದ ಹಾದಿಯಲ್ಲಿ ಹಾಕಿದ್ದರು.

—ಅದರ ಹಿಂದೆ ಯುವತಿಯರಿಬ್ಬರು ಬಸ್ಸಿಗಾಗಿ ಕಾಯುತ್ತಾ ನಿಂತಿದ್ದರು.

ಶ್ರೀರಾಮ ರಕ್ಷೆ

ಗಂಟೆ ಐದಾಗಿರಬಹುದು. ಹೈಸ್ಕೂಲು ಹೃದಗಳನ್ನು ಮೇಯಿಸಿ ಸುಸ್ತಾದ ನಮ್ಮಣ್ಣ ಮನೆಗೆ ಬಂದ. ಎಂದಿಗಿಂತಲೂ ಹೆಚ್ಚು ಕಂದಿದ್ದ ಅವನ ಮುಖಾನ ಕಂಡರೆ ಕ್ಲಾಸಿನಲ್ಲಿ ಯಾರೋ ಹುಡುಗರು ಕೀಟಲೆ ಎಬ್ಬಿಸಿ ಅವನನ್ನ ರೇಗಿಸಿರಬೇಕು ಅನಿಸಿತು. ಏನು ಹೀಗಿದೀಯ ಎಂದು ಕೇಳಿದೆ.

" ಶುದ್ಧ ಕಪಿಗಳು ಕಣೋ....ನಾನು ಹರಿಶ್ಚಂದ್ರ ಕಾವ್ಯ ಪಾಠ ಮಾಡ್ತಿದ್ದೆ....ಆ ಸಾಹುಕಾರ ಕೊಟ್ರಯ್ಯನ ಮಗ ಹಿಂದಿನ ಬೆಂಚ್ನಲ್ಲಿ ಒಬ್ರಿಬ್ರು ಪೋಲಿಗಳನ್ನ ಕೂಡ್ಕೊಂಡು ಹಲ್ಕಿರೀತಾ ಗುಲ್ಲೆಬ್ಬಿಸಿಕೊಂಡಿದ್ದ....ಕ್ಲಾಸಿಂದ ಹೊರದಬ್ಬಬೇಕಾಯಿತು ನೋಡು " ಎಂದ.

ನನ್ನ ಊಹೆ ಸರಿಯಾಗಿತ್ತು. " ಅಯ್ಯೋ ಅದಕ್ಕೆಲ್ಲ ನೀನು ತಲೆಬಿಸಿ ಮಾಡ್ತಾ ಇದ್ದರೆ ಸರಿಹೋಯಿತು ಬಿಡು....ಗುಲ್ಲು ಮಾಡಿದರೆ ಮಾಡ್ತಾವೆ....ಸುಮ್ನಿರು ... ಕೇಳೋವ್ರು ಪಾಠ ಕೇಳಲಿ...."

" ಸರಿ ಸರಿ....ನಿನ್ನ ಕೇಳಿದರೆ ಬಲು ಲಾಯಖ್ಖು ಹಾಗೆ ಕ್ಲಾಸಲ್ಲಿ ಗಲಾಟೆ ಮಾಡೋ ತುಂಟರಿಗೆ ಅವಕಾಶ ಕೊಟ್ಟರೆ ನಾವಿರೋದಾದರೂ ಯಾತಕ್ಕೆ ? ಮುಂದಕ್ಕೆ ಅವುಗಳವಸ್ಥೆ ಏನು....?"


" ಅವಸ್ಥೇನೂ ಇಲ್ಲ ಗಿವಸ್ಥೇನೂ ಇಲ್ಲ....ಎಲ್ಲ ಸರಿಹೋಗುತ್ತೆ....ಸಭೆ, ಸಮಾರಂಭ, ಸಮ್ಮೇಳನ ಎಂಬಲ್ಲೆಲ್ಲ ಬಂದ ಜನಗಳು ಸಂಭಾವಿತರಂತೆ ತೆಪ್ಪಗಿರ ಬೇಕಾದ ಕಾಲ ಹೊರಟ್ಹೋಯ್ತು ಬಿಡು....ಈವಾಗ ಗಲಭೆ ಕಚ್ಚಾಟ ಇಲ್ಲದೆ ಇದ್ರೆ ನೂರಾರು ಜನ ಒಂದು ಕಡೆ ಸೇರೋದೆ ವ್ಯರ್ಥ ಅನ್ನೋ ಹಾಗಿದೆ. ಭಾಷಣ ಮಾಡೋರು ಮಾಡ್ತಿರ್ತಾರೆ....ಕೇಳೋವ್ರು ಕೇಳ್ತಾರೆ....ಬೇಡವಾದವ್ರು ನಿದ್ದೆ ಮಾಡ್ತಾರೆ ...ಅಥವಾ ಗಲಾಟೆ ಮಾಡಿ ಆತನ ಮಾತನ್ನ ಮುಳುಗಿಸ್ತಾರೆ....ಬೇಕಾದರೆ ವಿಧಾನ ಸಭೆಗಳಲ್ಲಿ ನೋಡು ಪಾರ್ಲಿಮೆಂಟಲ್ಲೇ ನೋಡು....ಅದು ಬಿಡು ಕೆಲವು ದೇಶದ ಪಾರ್ಲಿಮೆಂಟುಗಳಲ್ಲಿ ಅಧ್ಯಕ್ಷ ಮಾತಾಡ್ತಿದ್ರೆ ಸದಸ್ಯರು ಕುರ್ಚಿ ಎತ್ಕೊಂಡು ಹೊಡೆದಾಡ್ತಾರೆ....ನೀನು ಮಕ್ಕಳು ಗಲಾಟೆ ಮಾಡಿದವು ಅಂತೀಯ.... ಅವು ಬೆಳೆದು ದೊಡ್ಡವರಾದಾಗ ಹ್ಯಾಗಿರಬೇಕೋ ಅದಕ್ಕೆ ಈವಾಗಲೇ ತರಬೇತಿ ಪಡೀತಿದಾವೆ ಅಷ್ಟೆ....ನೀನು ಸುಮ್ಮನೆ ರೇಗಿ ತಲೆಬಿಸಿ ಮಾಡೋದು ಯಾತಕ್ಕೆ ಅನ್ನೋದು ನಾನು ?

“ ನೀನಾಡ್ತೋದೆಲ್ಲ ಹುಚ್ಚುಚ್ಚು.... ಈ discipline ವಿಷಯದಲ್ಲಿ ಯೂನೋ ಆದರೂ ನಿಗಾ ತಗೊಂಡಿದ್ರೆ ತರುಣ ಜನಾಂಗ ಸರಿದಾರೀಲಿ ನಡೆಯೋವಂಥ ಮಾರ್ಗ ಹುಡುಕಬಹುದಿತ್ತು” ಅಂತ Unoಗೆ ಮರೆ ಹೊಕ್ಕ ನಮ್ಮಣ್ಣ.

ಆಗ ಅಲ್ಲೇ ಬಿದ್ದಿದ ಪೇಪರೆತ್ಕೊಂಡು ಆದರಲ್ಲಿದ್ದ ಒಂದು ಸುದ್ದಿ ತೋರಿಸಿದೆ. Uno ಅಸೆಂಬ್ಲೀಲಿ ಕೃಷ್ಣಮೆನನ್ ಕಾಂಗೋ ಕುರಿತು ಭಾಷಣ ಮಾಡ್ತಿದ್ದಾಗ ಅಮೇರಿಕನ್ ನಿಯೋಗದ ನಾಲ್ಕೈದು ಮಂದಿ ಸಲಹೆಗಾರರು ತುಂಬ ಘಟ್ಟಿಯಾಗಿ ಲಲ್ಲೆ ಹೊಡಿತಾ ಮಜಾದಲ್ಲಿದ್ದ ಸಮಾಚಾರ ಅದು !

ಓದಿ ನೋಡಿ ಅಣ್ಣ ಹಣೆ ಚಚ್ಚಿಕೊಂಡು “ ಶ್ರೀರಾಮರಕ್ಷೆ” ಎಂದ.

—ರಾಮಿ.



ಈ ‘ ಉಪವಾಸ ’ ಹೂಡೋರನ್ನೆಲ್ಲಾ ಮಂತ್ರಿಗಳನ್ನಾಗಿ ಕೂರಿಸಿ ಬಿಡಬೇಕು ನೋಡಿ ಆಗ ಅವರ ಬಾಲ ಕತ್ತರಿಸಿದ ಹಾಗಾಗುತ್ತೆ!

ಕೆಲಸಕ್ಕೆ ಭೇಟಿ

ಹೆಬ್ಬಿ ಗುಬ್ಬಾಲೆಯ ಕನ್ಯಾಮಣಿಯೊಬ್ಬಳು ಪದವೀಧರಳಾದಾಗ, ಕಂಟ್ರೋಲರ್ ಕಚೇರಿಯ ಕೆಲಸಕ್ಕೆ ಅರ್ಜಿ ಹಾಕಿದ್ದಳು. ವೈಯಕ್ತಿಕ ಭೇಟಿಗೆ ಕರೆಬಂತು. ಭೇಟಿಯಾದಾಗ, ಭೇಟಿಕಾರರು " ಯಾವೂರಮ್ಮ ನಿಮ್ಮದು" ಎಂದು ಕೇಳಿದರು.

ಕ. ಮ. " ಹೆಬ್ಬಿಗುಬ್ಬಾಲೆ "

ಭೇ. ಕಾ. " ಓಹೋ ! ಹಾಗೋ ? ಓದಿದ್ದೆಲ್ಲೀವಮ್ಮಾ "

ಕ. ಮ. " ಕಾಲೇಜಿನಲ್ಲಿ "

ಭೇ. ಕಾ. " ೧ ಸೇರು ಹಾಲು ಕೊಡುವ ಹಸುವನ್ನು ಕಟ್ಟಿದರೆ ತಿಂಗಳಿಗೆ ೪೦ ರೂ. ಖರ್ಚು, ೨ ಸೇರು ಹಾಲು ಕೊಡುವ ಎಮ್ಮೆ ಕಟ್ಟಿದರೆ ೭೦ ರೂ. ಆಗುತ್ತೆ. ಎರಡು ಹಸು ಕಟ್ಟಿದರೆ ಲಾಭವ್ರೊ, ಒಂದು ಎಮ್ಮೆ ಕಟ್ಟಿದರೆ ಲಾಭವೋ ? "

ಕ. ಮ. " ೨ ಹಸು ಕಟ್ಟಿದರೆ ಹಾಲಿನಲ್ಲಿ ನಷ್ಟ, ಆದರೆ ಸಗಣೀಲಿ ಲಾಭ "

ಭೇ. ಕಾ. " ಬಲು ಜಾಣ ಲೆಕ್ಕವಮ್ಮಾ ನಿಂದು "

ಕ. ಮ. " ಪದವೀಧರಳನ್ನ ಕೇಳಿದ ಪ್ರಶ್ನೆ ಜಾಣತನದ್ದು ಅಂತ ನಾನು ಹೇಗೆ ಹೇಳಲಿ "

ಭೇ. ಕಾ. " ಹೆಬ್ಬಿ ಗುಬ್ಬಾಲೆ ಅಂದೆಯಲ್ಲಮ್ಮ "

ಕ. ಮ. " ಹೆಬ್ಬಿಗುಬ್ಬಾಲೆ ತಂದೆ ಊರು. ಆದರೆ ತಾಯಿ ಜಾಣಪುರದೋಳು. ಅದೇ ಕಾಲೇಜಲ್ಲಿ ನಾನು ಓದಿ ಪದವೀಧರಳಾಗಿದ್ದು "

ಭೇ. ಕಾ. " ಜಾಣಪುರವೋ ? ನಮ್ಮ ಅತ್ತೆಮನೆ ಅದೇ ಊರಲ್ಲಮ್ಮ "

ಕ. ಮ. " ಅಂದರೆ ನೀವೂ ಹೆಬ್ಬಿಗುಬ್ಬಾಲೆ ಗಂಡಸು ! "

ಕನ್ಯಾಮಣಿಗೆ ಕೆಲಸ ಸಿಕ್ಕಿತು.

" ರಾತ್ರಿ ನಾಟಕಕ್ಹೋಗಿ ಹಿಂತಿರುಗಿದಾಗ, ಹಾಸ್ಟೆಲ ಗಡಿಯಾರವು ೨ ಗಂಟೆ ಬಾರಿಸಿತ್ತು. ಹಾಸ್ಟಲ್ ವಾರ್ಡನ್ನಳು ತುಂಬಾ ಆಕ್ಷೇಪಣೆ ಮಾಡಿದಳು. ನನಗೆ ೨೦ ವರ್ಷ, ಬೆಳೆದ ಹುಡುಗಿ. ಕಾಲೇಜಲ್ಲಿ ಓದೋ ನನಗೆ ಇಷ್ಟೂ ಸ್ವಾತಂತ್ರ್ಯ ಬೇಡವೇ ? ನಾನೇನು ಅಂಥಹ ತಪ್ಪು ಮಾಡಿದ್ದು ? "

ಎಂದು ಮಹಿಳಾ ಹಾಸ್ಟೆಲಿನ ವಿದ್ಯಾರ್ಥಿನಿಯು ಪ್ರಶ್ನೋತ್ತರ ವಿಭಾಗಕ್ಕೆ ಕಾಗದ ಬರೆದಿದ್ದಳು.

" ಜ್ಞಾಪಿಸಿಕೊ " ಎಂದು ಮುಗುಮ್ಮಾಗಿ ಉತ್ತರ ಬಂದಿತ್ತು.

ಶ್ರೀನಿವಾಸ ಕಲ್ಯಾಣ

ಮೈಗಳ್ಳರ ಸಂಘದ "ನೀಲಿ ಕೋಣೆ" ಸೇರಿ ಯೋಚಿಸುತ್ತ ಕುಳಿತಿದ್ದೆ. ಮೈಗಳ್ಳರ ಸಂಘದ ನೀಲಿ ಕೋಣೆ ಸೇರಿ ಯೋಚಿಸುತ್ತ ಕುಳಿತವರನ್ನು ಯಾರೂ ಪೀಡಿಸಬಾರದೆಂಬ ಅಲಿಖಿತ ಕಾನೂನಿದೆ—ಮೈಗಳ್ಳರಲ್ಲಿ. ಇಂತಹ ಕಾನೂನು ಉಲ್ಲಂಘಿಸಿದಾತನಿಗೆ ಸಂಘದ ಸದಸ್ಯರೆಲ್ಲರ ಸಾಯಂಕಾಲದ ಖರ್ಚನ್ನೆಲ್ಲಾ ವಿಧಿಸಬೇಕೆಂಬ ನಿಯಮವೂ ಇದೆ. ಅಂದು ನನ್ನ ಯೋಚನೆಯ ವಿಷಯ—ಹಿಂದಿನ ವಾರ ಮಂಡ್ಯ ಪ್ಲೇಟಿನಲ್ಲಿ ತುಫಾನ್-ಕಿ-ಭೇಟಿ ಕೇವಲ 6 ಫರ್ಲಾಂಗ್ ರೇಸಿನಲ್ಲಿ 5½ ಫರ್ಲಾಂಗ್ ದೂರ ಎಲ್ಲ ಕುದುರೆಗಳಿಗೂ ಮುಂದಿದ್ದು—ಅದೇನು ಆ ವಿಜಯ ಸ್ತಂಭದ ಮೇಲೆ ಗೂಬೆ ಕುಳಿತಿತ್ತೋ ಏನೋ!—ಹಟಾತ್ತನೆ ತನ್ನ ಹಿಂಗಾಲುಗಳ ಮೇಲೆ ನಿಂತು ಕುಣಿಯಲಾರಂಭಿಸಿತ್ತು. ಆ ಕುಣಿತಕ್ಕೆ ನನ್ನ ಸುಮಾರು ಹಣ ಖರ್ಚಾಗಿತ್ತು. ಶೌರಿಯ ಮಾತನ್ನು ಮೀರಿ ಆ ತುಫಾನ್-ಕಿ-ಭೇಟಿಯನ್ನು ವರಿಸಿದ್ದೆ. ಇದೇ ಯೋಚನೆಯಲ್ಲಿ ಕುಳಿತಿದ್ದೆ.

ಶೀನಿ ಬಂದ.

ಶೀನಿ—ನಿಮಗೆ ಜ್ಞಾಪಕವಿರಬಹುದು. ಹುಣಸೂರು ವೆಂಕಟರಾಯರ ಮಗ—ಹಾಗೂ ನಮ್ಮ ನಾಗತ್ತೆಯ ಅಣ್ಣನ ಮಗ. ಇದೇ ಶೀನಿ ಹಿಂದೆ ಒಂದು ಬಾರಿ ಮೈಗಳ್ಳರ ಸಂಘದ ಅಂಗಳದಲ್ಲಿರುವ ನೀರಿನ ತೊಟ್ಟಿಯಲ್ಲಿ ಬೀಳಿಸಿದ್ದ. ಅದು ಹೀಗೆ—ಆ ನೀರಿನ ತೊಟ್ಟಿಯನ್ನು ಹಾರಲು ನನ್ನಿಂದ ಪಂದ್ಯ ಕಟ್ಟಿಸಿದ. ಅದು ಸುಮಾರು ಆರಡಿ ಅಗಲದ ಗುಂಡನೆ ತೊಟ್ಟಿ. ತುಂಬ ನೀರು. ಪ್ರಾಯಶಃ ನಮ್ಮ ಸಂಘದ ಮನೆಯ ಮಾಲೀಕನ ಮುತ್ತಾತ ಈಜಲು ಕಟ್ಟಿಸಿಕೊಂಡಿದ್ದನೆಂದು ಕಾಣುತ್ತೆ! ಆ ನೀರು ತುಂಬಿದ ತೊಟ್ಟಿಯನ್ನು ಹಾರಲು ನಾನು ತಯಾರಾಗುತ್ತಿದ್ದಾಗ ಈ ಶೀನಿ ಹಾರು-ಮೇಜನ್ನು ಒಂದು ಅಡಿಯಷ್ಟು ದೂರ ಹಿಂದೆ ಸರಿಸಿದ್ದ. ಇದರ ಫಲವಾಗಿ ನಾನು ನನ್ನ ಹೊಸಾ ಸೂಟಿನೊಂದಿಗೆ ತೊಟ್ಟಿಯಲ್ಲಿ ಬಿದ್ದಿದ್ದೆ. ಸಂಘದ ಸದಸ್ಯರನ್ನೆಲ್ಲಾ ಅಂಗಳಕ್ಕೆ ಕರೆದುಕೊಂಡು ಬಂದು, ಚಪ್ಪಾಳೆ ತಟ್ಟಿಸಿ ತಾನೂ ತಟ್ಟಿ ನಕ್ಕಿದ್ದ—ಈ ಪಾಪಿ! ಪುನಃ ಮದ್ರಾಸಿನಲ್ಲಿ ನನಗೆ ಗಂಟುಬಿದ್ದಿದ್ದ. ಶೌರಿಯ ಚಮತ್ಕಾರದಿಂದ ಪಾರಾಗಿದ್ದೆ. ಈಗ ಈ ನೀಲಿ ಕೋಣೆಗೂ ಬಂದ.

"ಓಹೋ ಪಾಂಡು—ಇಲ್ಲಿದ್ದೀಯಾ?"

"ಹೂ" ಅಂದೆ ಬಿಗುವಾಗಿ.

ಸ್ವಲ್ಪ ಹೊತ್ತು ಮೌನ.

"ಪಾಂಡು—ನೀನಿನ್ನೂ ಆ ನೀರು ತೊಟ್ಟಿಯ ವಿಷಯ ಮರೆತಹಾಗಿಲ್ಲ" ಅಂದ.

"ಇಲ್ಲ"

ಪುನಃ ತುಸು ಹೊತ್ತು ಮೌನ.

"ಪರವಾಗಿಲ್ಲ ಪಾಂಡು. ಈಗ ನಿನ್ನಿಂದ ಒಂದು ಉಪಕಾರವಾಗಬೇಕು" ಅಂದ ಭಂಡ.

"ಇಲ್ಲ" ಅಂದೆ ಪುನಃ.

"ಸ್ವಲ್ಪ ಕೇಳಿಯಾದರೂ ಕೇಳಯ್ಯ. ನಿನಗೆ ನಮ್ಮ ತಂದೆ ಗೊತ್ತಲ್ಲಾ...."

"ಏನಾಯ್ತು ವೆಂಕಟರಾಯರಿಗೆ?"

"ಸಧ್ಯ—ಇನ್ನೂ ಏನಾಗಿಲ್ಲ. ಆದರೆ ಅವರಿಗೆ ಏನಾದರೂ ಮಾಡಿ ಸುಮತಿಯ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯ ಬರುವ ಹಾಗೆ ನೀನು ಸಹಾಯ ಮಾಡಬೇಕು"

"ಸುಮತಿ! ಯಾವ ಸುಮತಿ?"

ನನಗೆ—ನನ್ನ ಸ್ನೇಹಿತರ ಮತ್ತು ಅವರ ಕನ್ಯೆಯರ ಬಗ್ಗೆ ಖಾತೆ ಇಡುವುದು ಸ್ವಲ್ಪ ಕಷ್ಟ. ಈ ಖಾತೆಯೆಲ್ಲಾ ಶೌರಿಯ ತಲೆಯಲ್ಲಿರುತ್ತೆ.

"ನಾನು—ಮದುವೆಯಾಗಬೇಕೆಂದಿರುವ ಹುಡುಗಿ"

ಪತ್ತೇದಾರಿ ಕಾದಂಬರಿಯಲ್ಲಿ ಹೇಳುವ ಹಾಗೆ—ನಾನು ಸ್ಥಂಭೀಭೂತನಾದೆ!

"ಯಾರಾಕೆ?"

"ಇದೇನಯ್ಯ ಹೀಗೆ ಕೇಳ್ತಿ?—'ಬಾನುಲಿ ಕಿರಣ'—'ರೇಖಾಹರಣ' ಕಾದಂಬರಿಗಳನ್ನು ಬರೆದಿಲ್ಲವೆ—ಆಕೆ! ಪಾಂಡು ನೀನು ಆ ಪುಸ್ತಕಗಳನ್ನು ಖಂಡಿತ ಓದಬೇಕು. ಆಹಾ ...ಅದರಲ್ಲಿ ಬರೋ ಪಾತ್ರಗಳ ಜೋಡಣೆ........"

ಹೀಗೇ ಬಿಟ್ಟರೆ—ಇಡೀ ಕಾದಂಬರಿಗಳನ್ನ ಇವನು ಇಲ್ಲೇ ಹೇಳಿ ಮುಗಿಸ್ತಾನೆ ಅಂತ ಕಂಡಿತು.

"ಶೀನಿ—ನಿಲ್ಸೋ!" ಅಂತ ಅರಚಿದೆ. ನಿಲ್ಲಿಸಿದ.

"ನಾನು ಕಾದಂಬರಿಗಳನ್ನು ಓದುವ ಅಭ್ಯಾಸವಿಟ್ಟಿಲ್ಲ. ಆಕೆ ಮತ್ತೇನೂ ಮಾಡಲಾರಳೇನು? ಹಾಗೂ ಯಾರು ಆಕೆ?" ಅಂತ ಕೇಳಿದೆ.

"ಇದೇನಯ್ಯ ಹೀಗೆ ಕೇಳ್ತಿ? ಇಲ್ಲಿ ಶಾಂಭವೀ ಶಿಶುವಿಹಾರ ನಡಿಸ್ತಾ ಇಲ್ವೆ—ಆ ಸುಮತೀಬಾಯಿ" ಅಂದ.

"ಓಹೋ! ಹಾಗಾದರೆ ನಿಷ್ಕರ್ಷೆಯಾಗಿದೆಯೋ?"

"ನಿಷ್ಕರ್ಷೆ? ಇನ್ನೂ ಮಾತು ಕೂಡ ಆಗಿಲ್ಲಯ್ಯ"

ನಾನು ಕೈಯೆತ್ತಿದೆ. ನನ್ನ ಸ್ನೇಹಿತರ ಮುಟ್ಠಾಳತನದ ಬಗ್ಗೆ ನಿಮಗೆ ತಿಳಿದಿದೆ. ಆದಕ್ಕೆ ಶೀನಿ ವ್ಯತಿರಿಕ್ತನಲ್ಲದಿದ್ದರೂ ಈ ಅಭಾಸವನ್ನು ನಾನು ನಿರೀಕ್ಷಿಸಿರಲಿಲ್ಲ.

"ಪಾಂಡು—ಈ ವಿಷಯದಲ್ಲಿ ನೀನು ನನ್ನ ತಂದೆಗೆ ಒಪ್ಪಿಸಬೇಕು"

"ಇದುವರಿವಿಗೂ ನಡೆದಿರುವ ಸಮಾಚಾರವೆಷ್ಟು?"

"ಎಷ್ಟೊಂದೂ ಇಲ್ಲ"

"ಅಂದರೆ?...."

"ಆಕೆಗೂ ಗೊತ್ತಿಲ್ಲ—ನನ್ನಪ್ಪನಿಗಂತೂ ಗೊತ್ತೇ ಇಲ್ಲ"

"ಹಾಗಿದ್ದ ಮೇಲೆ ಬ್ರಿಟಿಷ್ ರಾಜಕುಮಾರಿಯನ್ನೇ ವರಿಸಬಹುದಿತ್ತಲ್ಲ!" ಅಂದೆ ವ್ಯಂಗ್ಯವಾಗಿ.

"ಪಾಂಡು ಇದು ಹುಡುಗಾಟಿಕೆ ಅಲ್ಲಯ್ಯ. ನಿಜವಾಗಿ ನನ್ನ ಭವಿಷ್ಯವೆಲ್ಲಾ ಈ ಒಂದು ವಿಷಯದ ಮೇಲೆ ನಿಂತಿದೆ" ಅಂದ.

ಹಿಂದೆ—ಶ್ರೀಕಂಠ ಒಬ್ಬ ಆಶ್ರಮಕನ್ಯೆಯನ್ನು ವರಿಸಿ, ಆ ಸಂಬಂಧವನ್ನು ತಪ್ಪಿಸಲು ಶೌರಿಯು ಮಾಡಿದ ಉಪಾಯ ನಿಮಗೆ ಜ್ಞಾಪಕವಿರಬಹುದು. ಈಗಲೂ ಶೌರಿಯೇ ಇದಕ್ಕೆ ಸರಿಯಾದವ ಅನ್ನಿಸಿತು.

"ಶೀನಿ—ಈ ವಿಷಯವನ್ನ ಶೌರಿಯ ಹತ್ತಿರ ಹೇಳಿದ್ದೀಯ?"

"ಓಹೋ! ಅವನೇ ಹೇಳಿದ್ದು—ನಾಳೆ ನನ್ನಪ್ಪ ನಿಮ್ಮಲ್ಲಿಗೆ ಬರ್ತಾರೆ, ಮಧ್ಯಾಹ್ನದ ಬಸ್ಸಿನಲ್ಲಿ—ನಿನ್ನಲ್ಲೇ ಉಳೀತಾರೆ" ಅಂದ.

ವಿಷಯ ಇಷ್ಟು ಮುಂದುವರಿದಿರುವುದನ್ನು ಕೇಳಿ ಪುನಃ ಸ್ಥಂಭೀಭೂತನಾದೆ.

ಮಾರನೆಯ ದಿನ ಸಾಯಂಕಾಲದವರಿವಿಗೂ ನನಗೆ ಪುರುಸೊತ್ತೇ ಇರಲಿಲ್ಲ. "ಮನ್ನಾಡೇ ಆರಾಧಕರ ಸಂಘ"ದ ತುರುತು ಸಭೆ ಮತ್ತು "ಅಶ್ವಪೀಡಿತರ ಶೋಕ ಸಭೆ"ಗಳ ಮಧ್ಯೆ ನನಗೆ ಶೌರಿಯನ್ನು ವಿಚಾರಿಸಲೂ ಸಮಯ ಸಿಗಲಿಲ್ಲ. ಹಾಗಾಗಿ ನಾನು ಮಾರನೆಯ ದಿನ ಸಂಜೆ ಮನೆ ಸೇರುವ ಸಮಯಕ್ಕೆ ಹುಣಸೂರು ವೆಂಕಟರಾಯರ ಆಗಮನ, ಸ್ವಾಗತಗಳು ಶೌರಿಯ ಕೈಲಿ ನೆರವೇರಿದ್ದವು.

"ನಮಸ್ಕಾರ ವೆಂಕಟರಾಯರಿಗೆ" ಅಂದೆ.

"ಬಾ ಪಾಂಡು—ಬಹಳ 'ಬಿಸೀ' ಅಂತ ಕಾಣುತ್ತೆ" ಅಂದರು.

"ಹೂ—ಯಾವುದೋ ಮೀಟಿಂಗು....ಅದು....ಇದು...."

"ಸರಿ—ಆ ಮುಟ್ಠಾಳ ಶೀನಿ ಎಲ್ಲಿ?"

"ಶೌರಿ—"

"ಸರ್"

"ಶ್ರೀನಿವಾಸರಾಯರೆಲ್ಲಿ?"

"ನಿಮ್ಮನ್ನು ಹುಡುಕುತ್ತಾ ಸಂಘದ ಕಡೆ ಹೋದರು ಸರ್—ಅದೇ ಸರೋಜಾದೇವಿ ಭೇಟಿಗಾಗಿ...."

“ ಪಾಂಡು—ಆ ಶೀನಿ ಮುಟ್ಠಾಳ ಹಿಂದೆ ನೀನು ಮದ್ರಾಸಿನಲ್ಲಿದ್ದಾಗ ಬಂದಿದ್ದ ನಂತೆ. ನಿನ್ನ ಮೂಲಕ ಸರೋಜಾದೇವಿಯ ಗುರುತಾಯ್ತಂತೆ. ಈಗ ಆಕೆಯ ಹತ್ತಿರ ಡ್ರೈವರ್ ಆಗಿಯಾದರೂ ಸೇರ್ಲೇಬೇಕಂತೆ. ಏನು ಪಾಂಡು ಈ ಅನಿಷ್ಟ !”

ನಾನು ಮೂರನೆಯ ಬಾರಿ ಸ್ಥಂಬೀಭೂತನಾದೆ !

ಶೌರಿ ಕೆಮ್ಮಿದ.

“ ಸರ್....”

“ ಏನು ಶೌರಿ ? ”

“ ನನ್ನ ಸಲಹೆ ಕೇಳೋದಾದ್ರೆ ಶ್ರೀನಿವಾಸರಾಯರಿಗೆ ಒಳ್ಳೆಯ ಬುದ್ಧಿ ಕಲಿಸುವ ಹೆಣ್ಣನ್ನು ಕಟ್ಟಿ ಮದುವೆ ಮಾಡಿಬಿಟ್ಟರೆ ಎಲ್ಲಾ ಸರಿಹೋಗುತ್ತೆ ಸರ್ ”

“ ಅಯ್ಯೊ ಶೌರಿ—ಅದ್ಯಾರೋ ಅಂತಹ ಮಹರಾಯಿತಿ ! ಆಕೆ ಬಿಕಾರಿ ಆಗಿರಲಿ, ಕರ್ಕೊಂಡು ಬಾರಯ್ಯ. ಈಗಲೇ ಇಲ್ಲೀ ಈ ಮುಟ್ಠಾಳನಿಗೆ ಲಗ್ನ ಮಾಡಿಬಿಡ್ತೀನೆ”

“ ಬಿಕಾರಿ ಏನಲ್ಲ ಸರ್. ಸುಮತೀಬಾಯಿಯಂತಹ ಹುಡುಗಿಯಾದರೆ ಸರ್ ನಮ್ಮ ಯಜಮಾನರಿಗೆ ಗೊತ್ತು ಸರ್ ಎಲ್ಲಾ ”

ವೆಂಕಟರಾಯರು ನನ್ನ ಕಡೆ ತಿರುಗಿದರು.

“ ಏನು ಪಾಂಡು ! ಯಾರದು ಈಕೆ ಸುಮತಿಬಾಯಿ....”

“ ಆಕೆ—ಹೇಳು ಶೌರಿ ” ಅಂದೆ.

“ ಇಲ್ಲಿ ‘ ಶಾಂಭವೀ ಶಿಶುವಿಹಾರ ’ ಇಟ್ಟುಕೊಂಡಿದಾರೆ ಸರ್. ‘ ಬಾನುಲಿ ಕಿರಣ ’ ಮತ್ತು ‘ ರೇಖಾಹರಣ ’ ಕಾದಂಬರಿಗಳನ್ನು ಬರೆದಿದ್ದಾರೆ ಸರ್. ಮೆಟ್ರಿಕ್ ಆಗಿದೆ ಸರ್. ತಂದೆ ಇಲ್ಲ; ತಾಯಿ ಇದ್ದಾರೆ ಸರ್. ತನ್ನ ಈ ಸಂಪಾದನೆಯಿಂದ ಮನೆಯ ಸಂಸಾರ ನಡೆಸಿ ಇಬ್ಬರು ತಮ್ಮಂದಿರನ್ನು ಓದಿಸ್ತಾ ಇದ್ದಾರೆ ಸರ್. ಸುಮಾರು ಹತ್ತೊಂಬತ್ತು ವಯಸ್ಸು ಸರ್ ”

ನಾನು ಹಿಂದೆ ಹೇಳಿದ ಹಾಗೆ ನನ್ನ ಸ್ನೇಹಿತರ ಮತ್ತು ಅವರ ಕನ್ಯೆಯರ ಖಾತೆಯೆಲ್ಲಾ ಶೌರಿಯ ತಲೆಯಲ್ಲಿಯೇ ಇರುತ್ತೆ !

“ ಆಗಲಿ ಪಾಂಡು. ಈ ಮುಟ್ಠಾಳ ಆ ಸರೋಜಾದೇವಿ ಹುಚ್ಚು ಬಿಡುವುದಿದ್ರೆ—ಈಕೆ, ಯಾರದು ?....”

“ ಸುಮತೀಬಾಯಿ ”

“....ಸುಮತೀಬಾಯಿ—ನೀ ಹೇಳೋದು ನೋಡಿದ್ರೆ ಒಳ್ಳೆಯ ಹುಡುಗಿ ಅಂತ ಕಾಣುತ್ತೆ. ಸಂಧಾನ ನಡೆಸೇಬಿಡೋಣಯ್ಯ ” ಅಂದರು.

“ ಅದು ಒಳ್ಳೆಯದು ಸರ್. ಆಕೆಗೆ ಒಬ್ಬ ಪುರುಷರ ಸಹಾಯವೂ ಸಿಕ್ಕಿದರೆ ಬಹಳ ಚೆನ್ನಾಗಿ ನಡೆಯುತ್ತೆ ಸರ್ ಶಿಶುವಿಹಾರದ ಕೆಲಸ ” ಅಂದ ಶೌರಿ, ಗಂಭೀರನಾಗಿ.

ನಾನು ನನ್ನ ಕೋಣೆಯನ್ನು ಹೊಕ್ಕೆ ಹಾಗೇ ಮಂಚದ ಮೇಲೆ ಕುಳಿತೆ. ಏನೋ ಕಾಲು ಕೆರದಹಾಗಾಯ್ತು. ಬೆಕ್ಕು ಅಂತ ತಿಳಿದು "ಹುಷ್" ಅಂದೆ. ಶೀನಿ ಮಂಚದಡಿಯಿಂದ ಹೊರಕ್ಕೆ ಬಂದ.

"ಹುಷ್! ಪಾಂಡು ನಾನಿಲ್ಲಿರೋದು ಅಪ್ಪನಿಗ್ಗೊತ್ತಿಲ್ಲ"

ಮೌನ.

"ಪಾಂಡು—ಏನು ಹೇಳಿದ್ರು ಅಪ್ಪ?"

"ಶೀನಿ! ಯಾರಯ್ಯಾ ಅವರಿಗೆ ಹೇಳಿದ್ದು—ಮದ್ರಾಸಿನಲ್ಲಿ ನಿಂಗೂ ಸರೋಜಾದೇವಿಗೂ ಭೇಟಿ ಮಾಡಿಸಿದೆ ಅಂತ?"

"ಪಾಂಡು—ಷ್! ನಿನ್ನ ಪುಣ್ಯ ಆಮೇಲೆ ಹೇಳ್ತೀನೆ. ಈಗ ನೀನು ಅಪ್ಪನ್ನ ಕರ್ಕೊಂಡು ಹಾಗೇ ವಾಕಿಂಗ್ ತೊಲಗು. ನಾನು ಈ ರೂಮಿಂದ ಹೊರಗೆ ಹೋಗ್ಬೇಕು. ನನ್ನ ಕಾಲುಗಳು ಆಗಲೇ ಗಗನಯಾನಕ್ಕೆ ಹೊರಟಿವೆ" ಅಂದ.

ಮೂರನೆಯ ದಿನ ಶಿಶುವಿಹಾರಕ್ಕೆ ಭೇಟಿ ಕೊಟ್ಟೆವು. ವೆಂಕಟರಾಯರಿಗೆ ಸಮಾಧಾನವಿದ್ದಂತೆ ತೋರಿತು ಅಂತೂ ಸುಮತೀಬಾಯಿಯ ತಾಯಿಯ ಹತ್ತಿರ ಸೂಚನೆ ಮಾತುಗಳಾಡಿ ಹುಣಸೂರಿಗೆ ಹೊರಟರು. "ಶ್ರೀನಿವಾಸ ಕಲ್ಯಾಣ"ದ ನಾಂದಿ ಎಂದೇ ನನಗೆ ತೋರಿತು.

ಮನೆಯಲ್ಲಿ ಪುನಃ ಶಾಂತಿ ಏರ್ಪಟ್ಟ ಮೇಲೆ ಶೌರಿಯನ್ನು ವಿಚಾರಿಸಿದೆ.

"ಶೌರಿ"

"ಸರ್"

"ಅಂತೂ ಶ್ರೀನಿವಾಸರಾಯರ ಸಮಾಚಾರ ಸಮಾಧಾನದಿಂದ ಇತ್ಯರ್ಥವಾದ ಹಾಗಿದೆ ಅಲ್ವೆ?"

"ಹೌದು ಶೌರಿ. ನಾನು ಮೊದಲೇ ಅದು ಯೋಚಿಸಿದ್ದೆ. ಆದರೆ ಆ ಸರೋಜಾದೇವಿಯ ವಿಷಯ ..."

"ಅದು ನಾನೇ ಬರೆದಿದ್ದೆ ಸರ್ ವೆಂಕಟರಾಯರಿಗೆ"

"ಹೌದು ಸರ್"

"ಆದರೆ ನನ್ನ ಮೂಲಕ ಶೀನಿಗೆ ಆಕೆಯ...."

"ಕ್ಷಮಿಸಿ ಸರ್. ಯಾರನ್ನಾದರೂ ನಂಬುವಂತೆ ಮಾಡಬೇಕಾದರೆ ಕೆಲವು ಸನ್ನಿವೇಶಗಳನ್ನು ಕಲ್ಪಿಸಬೇಕಾಗುತ್ತೆ ಸರ್. ಕಾಫಿ ಮಾಡಬೇಕಾದರೆ ನೀರು

"ಕಾಫಿ! ಕಾಫಿ ಇದೆಯೇ ಶೌರಿ?"

"ತರ್ತೀನೆ ಸರ್" ಅಂತ ಹೋದ.

—ಕೇಘ

ಒಂದಕ್ಕಿಂತ ಎರಡು ಹೆಚ್ಚು

ಮಧುಗೊಂಡ್ಹಳ್ಳಿ ಶಾನುಭೋಗರ ಮಗ ಸೀನಪ್ಪನಿಗೆ ಮೂಗಿನ ತುದೀಲೆ ಕೋಪ. ಪ್ರೈಮರಿ ಶಾಲಾಮಾಸ್ತರಾಗಿದ್ದ. ಅಲ್ಲಿಗೂ ತಾಳ್ಮೆ ಅನ್ನೋದೇ ಬರಲಿಲ್ಲ. ಶಾಲಾ ಹುಡುಗ ತಪ್ಪು ಲೆಕ್ಕ ಮಾಡಿದ ಅಂತ ಶಾಯಿ ಕುಡಿಕೇನೇ ಗೋಡೇಗೆ ಜಡಿದುಬಿಡೋದೇ! ಇಂಥೋನು ಹೇಗಾರೂ ಬಾಳ್ತಾನೋ, ಬೆಂಗಳೂರಲ್ಲಿ ಅಂತ, ವರ್ಗವಾಗಿ ಬಂದಾಗ, ಸೀನಪ್ಪನ ಎಳೆ ವಯಸ್ಸಿನ ಸ್ನೇಹಿತ ಲಾಯರು ಶಾಮಣ್ಣ ಬಲು ಆತಂಕಪಟ್ಟಿದ್ದ. ಶಾಮಣ್ಣನ ಮನೆ ಔಟ್ಹಾಸಿನಲ್ಲೇ ಸೀನಪ್ಪ ಬಾಡಿಗೆಗೆ ಇಳಿದಿದ್ದು ಕೂಡ.

ಮಧುಗೊಂಡ್ಹಳ್ಳಿ ಸಾಹುಕಾರರು ಬೆಂಗಳೂರಿಗೆ ಬಂದಿದ್ದರು. ಮಗಳ ಮದುವೆಗೆ ಜವಳಿ ಕೊಳ್ಳುಕ್ಕೆ ಅಂತ ಬರೆದಿದ್ದರು. ಲಾಯರು ಶಾಮಣ್ಣನ ಮನೆಯಲ್ಲೇ ಇಳಿದುಕೊಂಡರು. " ಜವಳಿ ವ್ಯಾಪಾರ ನನಗೇನೂ ತಿಳಿಯುಲ್ಲ. ಸೀನಪ್ಪನ್ನ ಅವನ ಹೆಂಡ್ತೀನ ಕರ್‍ಕೊಂಡು ಹೋಗಿ, ಅವರೇ ಚುನಾಯಿಸ್ತಾರೆ, ನನ್ನ ಹೆಂಡತಿ ತೌರಿಗೆ ಹೋಗಿದ್ದಾಳೆ" ಎಂದು ಲಾಯರು ಶಾಮಣ್ಣ ಹೇಳಿ, ಜಾರಿಕೊಂಡ.

ಸೀನಪ್ಪ, ಅವನ ಹೆಂಡತಿ, ಸಾಹುಕಾರರು ಜವಳಿ ವ್ಯಾಪಾರಕ್ಕೆ ಹೋದರು. ಹತ್ತಾರು ಸೀರೆಗಳ ಒಡಲು ಸೆರಗು ಬಿಚ್ಚಿ ಅಂಗಡಿಯವ ತೋರಿಸಿದ. ಒಂದಕ್ಕಿಂತ ಒಂದು ಚೆನ್ನಾಗಿತ್ತು. ಆರು ಸೀರೆ, ಹದಿನಾರು ರವಿಕೆಗಳನ್ನು ಸಾಹುಕಾರರು ಕೊಂಡುಕೊಂಡರು. ಆಗ ಸೀನಪ್ಪ ಹೇಳಿದ "ಲೇ! ಈ ಸೀರೆ ಚೆನ್ನಾಗಿದೆ ಅಲ್ವೇನೇ!" ಎಂದು ಹೆಂಡತಿಗೆ ತೋರಿಸಿದ. ಹೆಂಡತಿ ಕೂಡ ಹ್ಞೂ ಅಂದಳು. 'ಇದೇ ಊರೇನೋ ನಿಮ್ಮದು" ಎಂದ ಅಂಗಡಿಯವನು. ಹ್ಞೂ ಅಂದ ಸೀನಪ್ಪ. 'ಮನೆ ಎಲ್ಲೊ, ಕೆಲಸ ಏನೋ' ಎಂದ ಅಂಗಡಿಯುವ. ವಿವರಗಳನ್ನೆಲ್ಲಾ ಸೀನಪ್ಪನ ಹೆಂಡತಿ ಹೇಳಿದಳು. ಅಷ್ಟು ಹೊತ್ತಿಗೆ ಸಾಹುಕಾರ ದುಡ್ಡು ಕೊಟ್ಟು ರಸೀತಿ ಪಡೆದಿದ್ದ. ಎಲ್ಲರೂ ಜಟ್ಕಾ ಮಾಡಿಕೊಂಡು ಹಿಂತಿರುಗಿದರು.

"ನೀವೆಲ್ಲಾ ಮದುವೆಗೆ ಬರಬೇಕು, ಆಮೇಲೆ ಲಗ್ನಪತ್ರಿಕೆ ಕಳಿಸ್ತೀನಿ" ಎಂದು ಸಾಹುಕಾರರು ಹೇಳಿ ಹೊರಟು ಹೋದರು. ಮೂರು ದಿನ ಆಯ್ತು. ಶನಿವಾರ ಬೆಳಿಗ್ಗೆ ಶಾಲೆಗೆ ಹೋಗಿದ್ದ ಸೀನಪ್ಪ. ಯಾವನೊ ಒಬ್ಬ ಜವಾನ ಸೀನಪ್ಪನ ಮನೆಗೆ ಬಂದು ಒಂದು ಪ್ಯಾಕೆಟ್ ಕೊಟ್ಟು, 'ಯಜಮಾನರು ಕೊಟ್ಟುಬಿಟ್ಟು ಬಾ ಅಂತ ಹೇಳಿದ್ರು' ಎಂದು ಹೇಳಿ ಹೊರಟುಹೋದ.

ಸೀನಪ್ಪನ ಹೆಂಡತಿ ಪ್ಯಾಕೆಟ್ ಒಡೆದು ನೋಡಿದ್ಳು. ದಿವ್ಯವಾದ ಸೀರೆ. ಅವತ್ತು ಅಂಗಡಿಯಲ್ಲಿ ತಾನು ಖಾಯಿಷ್ ಮಾಡಿದ್ದ ಸೀರೇನೇ! ಹದಿನೆಂಟು

ವರ್ಷ ಆಯ್ತು ಮದುವೆಯಾಗಿ, ಒಂದು ಮಗೂನಾದರೂ ಹೆತ್ತು, 'ತೊಗೊಳ್ಳಿ ಅಂದ್ರೆ ಆಡಿಸಿ' ಅಂತ ಹೇಳೋ ಪುಣ್ಯ ನನ್ನದಾಗ್ಲಿಲ್ಲ. ಆದರೂ ನನ್ನ ಹುಟ್ಟಿದ ಹಬ್ಬಾನ ಮರೀದೆ, ಅವತ್ತು ಖಾಯಿಷ್ ಮಾಡಿದ ಸೀರೇನ ಕೊಂಡು ಕಳಿಸಿದ್ದಾರಲ್ಲ. ಇವರನ್ನು ಎಷ್ಟು ಅಂತ ಪ್ರೀತಿಸಲಿ, ಹೇಗೆ ತಾನೆ ಮುದ್ದಾಡಲಿ ಅಂತ ಸೀನಪ್ಪನ ಹೆಂಡತಿ, ಹೆಚ್ಚು ಕಡಿಮೆ ಎರಡು ತೊಟ್ಟು ಕಣ್ಣು ಹನಿಯನ್ನು ಆ ಸೀರೆ ಮೇಲೇ ಹಾಕಿಬಿಟ್ಟಳು. ಬೇಗ ಒರೆಸಿ ತಿರುಗಿ ಪ್ಯಾಕೆಟ್ಟು ಕಟ್ಟಿದಳು. ಅವರೇ ಮನೆಗೆ ಬಂದ ಮೇಲೆ ಒಡೆದು ಕೊಡಲಿ ಎಂದು ಅಂದುಕೊಂಡಳು. ಮಧ್ಯಾಹ್ನ ಮನೆಗೆ ಬಂದು ಊಟ ಆದಮೇಲೆ ಪ್ಯಾಕೆಟ್ಟು ಕೊಟ್ಟಳು, ಎಲಡಿಕೆ ಮಡಿಸಿ ಕೊಡೋವಾಗ. ಅಳು ಹೇಳಿದ್ದನ್ನೂ ಹೇಳಿದಳು. ಯಾವನೇ ಯಜಮಾನ! ಅವನ್ಯಾಕೇ ಕಳಿಸಿದ ಎಂದು ಸೀನಪ್ಪ ಪ್ಯಾಕೆಟ್ ಒಡೆದ. 'ಸೀರೆ! ಇದ್ಯಾರೆ ಕಳಿಸ್ದೋರು' ಎಂದು ಒಂದು ನಿಮಿಷ ತಲೆ ಕೆರೆದುಕೊಂಡ.

ಕೋಪ ಬಂದ್ಬಿಡ್ತು. ಎಂಥಾ ಹಲ್ಕ ಆ ಸಾಹುಕಾರ! ಏನೋ ನಮ್ಮೊರ್‍ನೋನು ಮಗಳ ಮದುವೆಗೆ ಜವಳಿ ಕೊಳ್ಳಲು ಬಂದಿದ್ದಾನೆ, ಶಾಮಣ್ಣ ಹೇಳಿದ ಅಂತ ನಾವಿಬ್ಬರೂ ಅವನ ಜತೆಗೆ ವ್ಯಾಪಾರಕ್ಕೆ ಹೋದರೆ, ಪಾಪಿ! ಲುಚ್ಛ!! ನಿನಗೆ ಸೀರೆ ಕೊಡುಕ್ಕೆ ಬರ್ತಾನಲ್ಲೇ! ಬಡವನ ಹೆಂಡತಿ ಇಂಥಾ ದಘೂತಿ ಸೀರೆ ಉಟ್ಟುಕೊಂಡರೆ ಜತೆ ಮೇಷ್ಟ್ರು ಹೆಂಡ್ತೀರು ಏನಾರೂ ಅನ್ನುಲ್ವೇನೇ! ತಡಿ, ಇವನಿಗೆ ಮಾಡ್ತೀನಿ ಎಂದು ಶೀನಪ್ಪ ಎಲೇನೂ ಇಸುಕೊಳ್ಳದೆ, ಅಡಿಕೇನೆ ಕಟಕಟ ಕಡಿಯುತ್ತ ಜವಳಿ ಅಂಗಡೀಗೆ ಹೋದ. "ಯಾರ್‍ರೀ! ನಿಮಗೆ ಹೇಳಿದ್ದು, ಈ ಸೀರೇನ ನಮ್ಮನೆಗೆ ಕಳ್ಸಿ ಅಂತ. ಅವನ ಹತ್ತಿರ ಯಾಕ್ರಿ ದುಡ್ಡು ತೊಗೊಂಡ್ರಿ. ಜತೇಲಿ ಬಂದ ಮಾತ್ರಕ್ಕೆ ಅವನ ಹಂಗು ನಂಗ್ಯಾಕ್ರೀ" ಎಂದೆಲ್ಲ ರೇಗಿದ.

ಅಂಗಡಿಯವನು ಸಾವಧಾನವಾಗಿ ಹೇಳಿದ ಯಾರೂ ದುಡ್ಡು ಕೊಟ್ಟಿಲ್ಲ ಇದಕ್ಕೆ. ನೀವೇ ಮನೆ ವಿಳಾಸ ಕೊಟ್ಟು, ಇಂತಹ ಶಾಲೇಲಿ ಕೆಲಸಕ್ಕಿದ್ದೀನಿ ಅಂತ ವಿವರಗಳನ್ನೆಲ್ಲಾ ಕೊಟ್ಟು, ಮನೆಗೆ ಕಳಿಸಿ, ಬಿಲ್ಲೂ ಇಟ್ಟಿರಿ ಎಂದಿರಲಿಲ್ಲವೇ? ನಿನ್ನೆ ಶುಕ್ರವಾರ, ರಜಾ. ಅದಕ್ಕೇ ಇವತ್ತು ಕಳಿಸಿದ್ವಿ. ಬಿಲ್ಲೂ ಇದರಲ್ಲೇ ಇದೆ, ನೋಡಲಿಲ್ಲವೇ" ಎಂದ. ಪ್ಯಾಕೇಟ್ ಬಿಚ್ಚಿ ಸೀರೆ ಕೆಳಗಿದ್ದ ಬಿಲ್ಲನ್ನೂ ತೋರಿಸಿದ.

"ನಾನೆಲ್ಲಿ ಹೇಳಿದೆನಯ್ಯಾ, ಮನೆಗೆ ಕಳಿಸು ಅಂತ. ವಿಳಾಸ, ಕೆಲಸ ಹೇಳಿದೆ ನೀವು ಕೇಳಿದ್ದಕ್ಕೆ. ನಂಗೇನೂ ಬೇಡ" ಎಂದ. ಸ್ವಲ್ಪ ಸುಸ್ತಾದ ಸೀನಪ್ಪ.

"ಏನ್ರೀ ಮಾತಾಡೋದು? ಕೊಂಡುಕೊಂಡು ಬಿಟ್ಟು ಉಟ್ಟುಕೊಂಡುಬಿಟ್ಟಿದಿರೇನೋ—ಈಗ ಹಿಂತಿರುಗಿ 'ತೊಗೋ' ಎಂದರೆ ಸಾಧ್ಯವಿಲ್ಲ. ಕೊಂಡಿದ್ದಕ್ಕೆ ಸಾಕ್ಷಿ ಇದ್ದಾರೆ ಗೊತ್ತೇ? ಮನೆಗೆ ಹೋಗಿ ದುಡ್ಡು ಕಳಿಸಿ. ಇಲ್ಲದೆ ಇದ್ದರೆ ಕಟ್ಟಳೆ ಹೂಡ್ತೀವಿ" ಎಂದ ಅಂಗಡಿಯವ, ನಯವಾಗಿಯೇ.

ಪೆಚ್ಚಾಗಿ ಹಾಗೂ ಒಳಗೊಳಗೇ ರೇಗುತ್ತ ಸೀನಪ್ಪ ಹಿಂತಿರುಗಿದ. ಹೆಂಡತೀಗೆ ಹೇಳಿದ, "ಪಾಪ! ಆ ಸಾಹುಕಾರನ್ನ ಅನ್ಯಾಯವಾಗಿ ಬೈದೆ! ಹೀಗೆ ಹೀಗೆ

ಆಯ್ತು. ನೀನು ಅಡ್ರೆಸ್ಸು, ಕೆಲಸ ಎಲ್ಲಾ ಹೇಳಿದ್ದೇ ತಪ್ಪಾಯ್ತು" ಎಂದು ಅವಳ ಮೇಲೆ ರೇಗಿದ.

"ಚೆನ್ನಾಯ್ತು ಅಂದ್ರೆ, ಹುಟ್ಟಿದ ಹಬ್ಬದ ದಿನ ಬಯಸ್ಸಿಕೊಳ್ಳೋದು ನನ್ನ ಹಣೇಬರಹ ನಾನೇನು ಮಾಡಿದೆ. ನಿಮ್ಮ ಸ್ನೇಹಿತರು ಲಾಯರು ಶಾಮಣ್ಣ ನೋರು ಇಧಾರಲ್ಲ. ಅವರೇ ಅಲ್ಲವೇ ನಮ್ಮನ್ನ ಕಳಿಸಿದ್ದು. ಅವರನ್ನೇ ಹೋಗಿ ಬಯ್ಯಬಾರದೇ" ಎಂದು ಹೆಂಡತಿ ತಿರುಗಿಬಿದ್ದಳು.

ದಿಟ ಕಣೆ, ನೀನು ಹೇಳೋದು ಅಂತ ಸೀನಪ್ಪ ಮುಂದಿನ ಮನೆಗೆ ಹೋದ. ಆಗತಾನೇ ಶಾಮಣ್ಣ ಕೋರ್ಟಿಂದ ಮನೆಗೆ ಹಿಂತಿರುಗಿ ಬರುತ್ತಿದ್ದ.

"ಎಂಥಾ ಕೆಲ್ಸ ಮಾಡಿದೆಯಯ್ಯಾ, ಎಲ್ಲಾ ನಿನ್ನಿಂದ" ಅಂತ ಅವನ ಮೇಲೆ ಸೀನಪ್ಪ ರೇಗಿಬಿದ್ದ. ವಿವರಗಳನ್ನೆಲ್ಲಾ ಹೇಳಿದ.

"ಇಷ್ಟೇನೆ! ಏನೂ ಯೋಚನೆ ಮಾಡಬೇಡ. ಕಟ್ಟಳೆ ನೋಟೀಸು ಬಂದರೆ ನನಗೆ ಕೊಡು, ನಾನೆಲ್ಲ ನೋಡಿಕೋತೇನೆ" ಎಂದ ಶಾಮಣ್ಣ ನಗುತ ನಗುತ.

"ಮತ್ತು ಸೀರೇನ ಏನು ಮಾಡಲಿ" ಎಂದ ಸೀನಪ್ಪ.

"ನಿನ್ಹೆಂಡ್ತಿ ಹತ್ತಿರವೇ ಇರಲಿ" ಎಂದ ಶಾಮಣ್ಣ.

* * * *

ಒಂದು ವಾರ ಆಯ್ತು, ಕಟ್ಟಳೆ ನೋಟೀಸು ಬಂತು. ಶಾಮಣ್ಣನಿಗೆ ತಲಪಿ ಸಾಯ್ತು. ಕೋರ್ಟಿಂದ ಇಂಥ ದಿನ "ಹಿಯರಿಂಗ್" ಅಂತ ನೋಟೀಸ್ ಬಂತು. ಅದನ್ನೂ ಶಾಮಣ್ಣನಿಗೆ ಕೊಟ್ಟಾಯ್ತು—ನಾನೆಲ್ಲ ನೋಡಿಕೋತೇನೆ" ಎಂದ ಶಾಮಣ್ಣ.

ಹಿಯರಿಂಗ್ ಆದ ಸಂಜೆ ಶಾಮಣ್ಣನನ್ನು ಕಂಡು ಸೀನಪ್ಪ 'ಏನಾಯ್ತು' ಅಂದ. 'ಕೇಸ್ ನಮ್ಮ ಕಡೆ ಆಯ್ತು' ಎಂದ ಶಾಮಣ್ಣ. ಹಾಗಾದರೆ ಸೀರೇನ ವಾಪಸು ಕಳಿಸೋದು ಯಾವಾಗ, ಹೇಗೆ ಎಂದ ಸೀನಪ್ಪ. ಕಳಿಸಬೇಕಾಗಿಲ್ಲ ಎಂದ ಶಾಮಣ್ಣ. ಹಾಗಂದರೆ? ಎಂದ ಸೀನಪ್ಪ.

"ನೀನು ಕೊಂಡುಕೊಂಡಿದ್ದಕ್ಕೆ ಅವರು ಒಂದು ಸಾಕ್ಷೀನ ನಿಲ್ಲಿಸಿದರು. ನಾನು ಒಪ್ಪಿಕೊಂಡೆ. ಆಮೇಲೆ ನೀನು ಹಣ ಕೊಟ್ಟಿದ್ದಕ್ಕೆ ಇಬ್ಬರು ಸಾಕ್ಷಿಗಳನ್ನು ನಿಲ್ಲಿಸಿದೆ. ಒಬ್ಬನಿಗಿಂತ ಇಬ್ಬರು ಹೆಚ್ಚಲ್ಲವೇ? ನಮ್ಮ ಕಡೆಗೆ ಆಯಿತು ತೀರ್ಪು ಎಂದ ಶಾಮಣ್ಣ.

* * * *

"ಒಳ್ಳೆ ಮನಸ್ಸು ಅಂದ್ರೆ ನಿಮ್ದು" ಎಂದಳು. ಹೊಸ ಸೀರೆ ಉಟ್ಕೊಂಡ ಸೀನಪ್ಪನ ಹೆಂಡತಿ 'ಹುಟ್ಟಿದ ಹಬ್ಬಕ್ಕೆ ಒಳ್ಳೇ ಉಡುಗೊರೆ ಸಿಕ್ತು ಅಂದ್ರೆ' ಎಂದಳು.

* * * *

ಪುಸ್ತಕ ಓದ್ತಾ ಇದ್ದೆ-ಕಣ್ಬಿಟ್ಟೆ

— ೧ —

"ಎಲೆ ಬೆಕ್ಕೆ ರೂಪಿನಿಂದಲೇ ಹುಲಿ ಜಾತಿಗೆ" ಓದ್ತಾ ಇದ್ದೆ. ವಯಸ್ಸಾದ ಮೇಲೆ ಬಾಲಬೋಧೆ ಓದುವುದಕ್ಕೆ ಏನೋ ಖುಷಿ. ಸಣ್ಣ ಮಕ್ಕಳ ಮೊದಲ ಪಾಠ ಓದಿದರೆ, ಏನೇನೋ ದೊಡ್ಡ ದೊಡ್ಡ ಅರ್ಥ ಮಾಡೋ ಹಾಗಾಗುತ್ತೆ, ಮುಪ್ಪು ಬಂದಾಗ. ಅಷ್ಟರಲ್ಲೇ ಕಿಟಿಕಿಯಾಚೆ ಹಣಾಹಣಿ ಜಗಳ ಆದ ಶಬ್ದ ಕೇಳಿಸಿತು. ಎದ್ದು ಹೋಗಿ ಕಿಟಕೀಲಿ ನೋಡಿದೆ. ಕಾಂಪೌಂಡ್ ಮೇಲೆ ಎರಡು ಬೆಕ್ಕುಗಳು ಗುರ್ ಗುರ್ ಮಾಡ್ತಾ, ಕಿರಚ್ತಾ, ಹಾರಾಡ್ತಾ ಕಾದಾಡ್ತಾ ಇದ್ದುವು. ಸರಿ! ಇಷ್ಟೇನೆ! ಅಂತ ಹಿಂತಿರುಗಿ ಕೂತುಕೊಂಡೆ. "ಎಲೆ ಬೆಕ್ಕೆ ರೂಪಿನಿಂದಲಿ ಕಾಣಿಸಿತು ಪುಸ್ತಕದಲ್ಲಿ ಊರ ಬೆಕ್ಕುಗಳು ಪ್ರಣಯವಾಡುವಾಗ ಹೀಗೆಲ್ಲಾ ಗಲಭೆ ಎಬ್ಬಿಸುತ್ತಲ್ಲ! ಇದರ ಹಾಗೆಯೇ ಕಾಡಿನಲ್ಲಿ ಕೂಡ ಹುಲಿ ಸಿಂಹಗಳು ಮದುವೆಯಾಗೋವಾಗ ಹೀಗೆ ಗುರ್ ಗುರ್ ಮಾಡುತ್ತೇನೋ ಎನ್ನಿಸಿತು ಊರಿನಲ್ಲಿರೋ ನಾವು ಹಳೇ ಚಪ್ಪಲಿ, ಕಲ್ಲು, ಹೆಂಟೆ ಇತ್ಯಾದಿಗಳನ್ನು ಬೆಕ್ಕಿನ ಮದುವೆ ಮೆರವಣಿಗೆ ಮೇಲಕ್ಕೆ ಅರಳು ಅಕ್ಕಿ ಹಾಕಿದ ಹಾಗೆ ಎಸೀತೀವಿ ; ಹಾಗೇನೇ ಕಾಡುಮನುಷ್ಯನೂ ಕೂಡ ಹುಲಿ ಮದುವೇಲಿ ಕಲ್ಲು ಬಿಲ್ಲು ಬಾಣಾನ ಬಿರುಸಾಗಿ ಹಾರಿಸ್ತಾನೇನೋ ಎನ್ನಿಸಿತು.

ಅಷ್ಟರಲ್ಲೇ ಝೋಂಪು ಹತ್ತಿತು. ನಿದ್ರೆ ಬಂದಿತು. ಅಂದು ಭಾನುವಾರ ಮಧ್ಯಾಹ್ನ ಮಾಡಿದ್ದ ಬಿಸಿ ಬೇಳೆ ಹುಳಿಯನ್ನವನ್ನ ಸಂಜೆ ಮುಂದೆ ತಿಂದಿದ್ದೆ. ಹೊಟ್ಟೆ ತುಂಬಾ ಗಿಡಿದಿದ್ದೆ.

*   *   *   *

ಸುಮಾರು ದಿನಗಳು ಕಳೆದುವು. ತಿರುಗಿ ಭಾನುವಾರ ಬಂದಿತ್ತು. ಅವರೆ ಕಾಯಿ ಹುಳಿ, ಹುರುಳಿ ಹಪ್ಪಳ, ಗೋರಿಕಾಯಿ ಬಾಳಕ ಮಾಡಿದ್ದರು. ಗಡದ್ದಾಗಿ ತಿಂದಿದ್ದೆ. ಮಧ್ಯಾಹ್ನ ಸೊಗಸಾದ ನಿದ್ರೆ. ಏನೇನೋ ಕನಸು. ಯಾರೋ ತಿವಿದೆಬ್ಬಿಸಿದರು. ರೇಗುತ್ತಾ ಎದ್ದೆ. ನನ್ನ ಹೆಂಡತಿ ನಿಂತಿದ್ದಳು. ತುಂಬಾ ಕಾತುರಗೊಂಡ ಮುಖ. ಯಾಕೆ? ಏನಾಯ್ತು? ಎಂದೆ. "ನೋಡಿ ಅಂದ್ರೆ ಇಜ್ಜಿಲು ಷೆಡ್ಡಿನ ಹತ್ತಿರ ಮನೆ ಬೆಕ್ಕು ಮರಿ ಹಾಕಿತ್ತು. ಯಾವುದೋ ಗಡವ ಬೆಕ್ಕು ಬಂದು ರಾದ್ಧಾಂತ ಮಾಡ್ತಾ ಇದೆ. ಖೂನಿಗೀನಿ ಆಗೋ ತರಹ ಇದೆ. ಏನಾರೂ ಮಾಡಿ ಅಂದ್ರೆ! ಎಂದಳು. ಎದ್ದು ಹಿತ್ತಿಲ ಕಡೆ ಇದ್ದ ಇಜ್ಜಿಲು ಸೌದೆ ಷೆಡ್ಡಿನ ಬಳಿಗೆ

ಹೊರಟೆ. ಹಿತ್ತಿಲ ಬಾಗಿಲ ಹತ್ತಿರ ಒರಗಿಸಿಟ್ಟಿದ್ದ ಒನಕೇನ್ನೇ ಹಿಡಿದುಕೊಂಡು ಹೊರಬಿದ್ದೆ.

ಆ ಹೊತ್ತಿಗೆ ಬೆಕ್ಕಿನ ಪುಟಾಣಿ ಮರಿಯೊಂದನ್ನು ಗಡವಾ ಬೆಕ್ಕು ಬಾಯಲ್ಲಿ ಕಚ್ಚಿಕೊಂಡು ಹಿತ್ತಿಲ ಕಡೆ ಇದ್ದ ಸೀಬೇಮರ ಹತ್ತಿ ಕಾಂಪೌಂಡ್ ಮ್ಯಾಲೆ ಹಾರಿ ಓಡುತ್ತಿತ್ತು. ಹಿಂದೆ ಬಾಣಂತಿ ಬೆಕ್ಕು ಓಡುತ್ತಿತ್ತು. ಕೆಟ್ಟ ಕೆಟ್ಟದಾಗಿ ಕುಂಯ್ಗುಡುತ್ತ ಓಡುತ್ತಿತ್ತು.

ನಾನು ಮಾಡೋದೇನಿದೆ? ಗಡವ ಬೆಕ್ಕು ಮರೀನ ಹಾರಿಸಿಕೊಂಡು ಹೋಗೇ ಬಿಟ್ಟಿತ್ತು. ಹಿಂತಿರುಗಿದೆ, ನನ್ನ ಹಿಂದೆಯೇ ಹೆಂಡತಿ ನಿಂತಿದ್ದಳು. ಅವಳ ಹಿಂದೇನೇ ರಂಗಜ್ಜೀನೂ ಒಂದಿದ್ದಳು.

"ಬೆಕ್ಕಿನ ಸಂಸಾರವೇ ಹೀಗೆ, ನಾಲ್ಕು ಮರಿ ಹಾಕಿದೆ ಅಂತ ಬಾಣಂತಿ ಸುಸ್ತಾಗಿರೋವಾಗ ಗಡವ ಬೆಕ್ಕು ಬಂದು ಒಂದು ಮರೀನ ಹಾರಿಸ್ಕೊಂಡು ತಿಂದೇ ಬಿಡುತ್ತೆ. ಅದಕ್ಕೇ ಬಾಣಂತಿ ಬೆಕ್ಕು ಹುಷಾರಾಗಿರುತ್ತೆ. ಆದರೂ ಅದೇನಾದರೂ ಊಟಕ್ಕೆ ಅಂತ ಆ ಕಡೆ ಹೋದರೆ ಈ ಕಡೆ ಗಂಡುಮುಂಡೇದು ಮಗೂನೇ ತಿಂದು ಬಿಡುತ್ತೆ ರಾಕ್ಷಸ ಪ್ರಾಣಿ ಇದು" ಎಂದು ರಂಗಜ್ಜಿ ಬಯ್ಯೋಕ್ಕೆ ಶುರು ಮಾಡಿದ್ದಳು. ಮನೆಗೆ ಹಿಂತಿರುಗಿದಾಗ ನಿದ್ರೆ ಮಾಯವಾಗಿತ್ತು. ಮುಖ ತೊಳೆದುಕೊಂಡು ಕಾಫೀನಾದರೂ ಮಾಡಿಕೊಂಡು ಬಾ ಎಂದು ಆಕೆಗೆ ಹೇಳಿದೆ ಅಷ್ಟರಲ್ಲೇ ಯಾರೋ ಬಾಗಿಲಾಚೆಯಿಂದ ಕೂಗಿದರು. ಭಾನುವಾರದ ದಿನ, ಯಾವನಪ್ಪ ಬಂದು ಸತಾಯಿಸ್ತಾನೆ ಅಂತ ಮುಜುಗರ ಪಟ್ಟೇಕೊಂಡೇ ಹೊರ ಬಾಗಿಲ ತೆಗೆದೆ. ಹೊರಗಡೆ ರಾಮು ನಿಂತಿದ್ದ. "ಯಾವಾಗ ಬಂದ್ಯೋ! ಕಾಗದ ಬರೀ ಬಾರದಾಗಿತ್ತಾ" ಎಂದು ಅವನನ್ನು ಆದರದಿಂದ ಒಳಕ್ಕೆ ಕರೆದುಕೊಂಡು ಬಂದೆ "ಲೇ! ರಾಮು ಬಂದಿದ್ದಾನೆ, ಕಣೆ! ಮದುವೆಯಾದ ಹೊಸದರಲ್ಲಿ ನೀ ಹೇಳ್ತಾ ಇರಲಿಲ್ಲವೇ! ನಿಮಗೆ ರಾಮು ಇದ್ದರೆ ಆಯಿತು ಮನೆಬೇಡ, ಊಟಬೇಡ, ಹೆಂಡತಿ ಬೇಡ, ಏನೂ ಬೇಡ ಅಂತ ಆ ರಾಮು ಕಣೆ. ಕಾಫಿ ತರೋವಾಗ, ಗೋರಿಕಾಯಿ ಬಾಳಕ ಇದ್ದರೆ ನಾಲ್ಕನ್ನ ಸೌಟನಲ್ಲೇ ಕರಿದುಕೊಂಡು ಬಾ, ಅವನಿಗೆ ಬಲು ಇಷ್ಟ" ಅಂತ ಕೂಗಿ ಅಡಿಗೆ ಮನೆಗೆ ಹೇಳಿದೆ.

ನಂತರವೇ ರಾಮೂನ ಕೇಳಿದ್ದು "ಎಲ್ಲರೂ ಕ್ಷೇಮವೇ?" ಅಂತ. ಅವನು ಯಾವಾಗಲೂ ಕರಾಚೂರಿ ಮನುಷ್ಯ. ಹೇಳೋದನ್ನ ಕಡ್ಡಿ ತುಂಡು ಮಾಡಿದ ಹಾಗೆ ಒಡೆದು ಹೇಳ್ತಾನೆ. ನನ್ನ ಹಾಗೆ ಎಳ್ಳಂಬಳಸೆ ಮಾಡಿ ಮಾತನಾಡುಲ್ಲ. "ನೋಡು ರಾ. ಶಿ. ಮನೇಲಿ ಎಲ್ಲರೂ ಕ್ಷೇಮ. ದೊಡ್ಡ ಮಗಳಿಗೆ ಮದುವೆ ವಯಸ್ಸು. ಈ ಊರಿನ ಇನಾಂದಾರ್ ಕೃಷ್ಣಪ್ಪನವರ ಮಗ ಮದುವೆಗಿದಾನೆ ಅಂತ

ತಿಳಿಯಿತು. ಒಬ್ಬನೇ ಮಗ ಬಿ. ಎ. ಆಗಿದೆ. ಬೇಕಾದಷ್ಟು ಹಣ, ಮನೆ, ಜಮೀನು ಇದೆಯಂತೆ. ಜಾತಕ ಕೊಟ್ಟು ವಿಚಾರಿಸಿಕೊಂಡು ಹೋಗೋಣ ಅಂತ ಬಂದೆ. ಅವರ ವಿಚಾರ ನಿಂಗೇನಾದರೂ ಗೊತ್ತೆ? ನಂಜತೇಲಿ ಅವರ ಮನೆಗೆ ಬರಬೇಕು" ಎಂದು ಹೇಳಿದ. ಬಾಳಕದ ತಟ್ಟೆ, ಒಂದು ಬಟ್ಟಲು ಅವರೇಕಾಳು, ಕಾಫಿ ಎರಡು ಲೋಟ ತಂದಿಟ್ಟಳು ಅಷ್ಟು ಹೊತ್ತಿಗೆ ನನ್ನಾಕೆ. "ಚೆನ್ನಾಗಿಧೀರಾಮ್ಮಾ" ಅಂದ ರಾಮು. "ಮನೇಲೆಲ್ಲಾ ಕ್ಷೇಮವೇ. ನನ್ನ ಯಾಕೆ ಕೇಳ್ಬೇಕು. ಇಷ್ಟು ಹೊತ್ತಿಗೆ ನನ್ನ ಮೇಲೆ ಬೇಕಾದಷ್ಟು ಚಾಡೀನ ನಿಮ್ಮ ಹತ್ತಿರ ಇವರು ಹೇಳಿರಬೇಕಲ್ಲ" ಎಂದಳು.

"ಇನಾಂದಾರ್ ಕೃಷ್ಣಪ್ಪನವರ ಮಗನಿಗೆ ಹೆಣ್ಣು ಕೊಡುಕ್ಕೆ ಬಂದಿದ್ದಾನೆ ಕಣೆ" ಎಂದೆ. "ಪುಣ್ಯ ಮಾಡಿದ್ದಳು, ಆ ಹುಡುಗಿ. ಅಂಥೋರ ಮನೆ ಸೇರುಕ್ಕೆ. ಕೃಷ್ಣಪ್ಪನೋರು ಎಂಥ ಜಾಣರು ಅಂತ. ಮನೆಯೋರಿಗೆ ಒಂದು ಕಷ್ಟ ಇಲ್ಲ, ಒಂದು ತಾಪತ್ರಯ ಇಲ್ಲ. ಮೊನ್ನೆ ಕೃಷ್ಣಪ್ಪನೋರ ಹೆಂಡತಿ ಉದ್ಯಾಪನೆ ಮಾಡಿದರು. ಹೂವೀಳ್ಯಕ್ಕೆ ನಾನೂ ಹೋಗಿದ್ದೆ, ಬರಲೇಬೇಕು ಅಂತ ಅಂದಿದ್ದರು ಹೂವು, ವಿಳ್ಳೇದೆಲೆ ತಟ್ಟೆಲಿಡೋದು, ಪುರೋಹಿತರು ಏನು ಮಂತ್ರ ಹೇಳ್ಬೇಕು, ಉದ್ಯಾಪನೆಗೆ ಹೇಗೆ ಕೂತುಕೋಬೇಕು ಎಲ್ಲವನ್ನೂ ಅವರೇ ಖುದ್ದಾಗಿ ಹೇಳಿ ಮಾಡಿಸ್ತಾ ಇದ್ದರು ವೈನವಾಗಿ ಸಂಸಾರ ಮಾಡಬೇಕು ಅಂದರೆ, ಕೃಷ್ಣಪ್ಪನೋರ ಹತ್ತಿರ ಕಲಿತುಕೋಬೇಕು! ಅವರಿಗೇನು ಆಳು ಕಾಳು, ಕೂಲಿನಾಲಿ ಎಂದರೆ ಕಡಿಮೇನೇ! ಆದರೂ ಎಲ್ಲಾನೂ ತಾವೇ ನೋಡಿಕೋತಾರೆ. ಸರ್ಪಗಾವಲು ಅವರದ್ದು. ಸಾವಿರ ಕಣ್ಣು!" ಎಂದು ಈಕೆ ಹೇಳಿದಳು. ಹೆದರಿಕೊಂಡಿದ್ದೆ ನಾನು, ಇಷ್ಟು ಮೆಚ್ಚಿದೋಳು ಕಡೆಗೆಲ್ಲಿ ಲೊಚಗುಟ್ಟುತಾಳೋ ಅಂತ ಸದ್ಯ. ತ್ಸು ತ್ಸು ಅಂತ ಲೊಚಗುಡಲಿಲ್ಲ! ಕೇಳಿದೆ ಯಾಪ್ಪಾ! ಹೋಗೋಣ ಬಾ ಅಂತಂದೆ ಎರಡು ನಿಮಿಷ ಇರು. ನನ್ನ ಮದುವೆ ಪಂಚೆ ಅಂಗಿ ಧರಿಸಿ ಬರ್ತೀನಿ. ದೊಡ್ಡ ಮನುಷ್ಯರ ಮನೆಗೆ ಹೋಗೋವಾಗ ತಕ್ಕ ಬಹಿರೂಪ ಇರಬೇಕು ಎಂದು ಹೇಳಿ ಕೊಠಡಿಗೆ ಹೋದೆ.

ಇನಾಂದಾರ್ರ ಮನೆಗೆ ಹೋಗಿ ಬಂದೆವು ಇನಾಂದಾರ್ರ ಹುಡುಗ ಲಕ್ಷಣವಂತ. ಅಪ್ಪ ಕೂತುಕೋ ಅನ್ನೋತನಕ, ನಮ್ಮೆದುರಿನಲ್ಲಿ ಅವ ಕೂತುಕೊಳ್ಳಲೇ ಇಲ್ಲ. ಅಪ್ಪ ನುಡಿದ ಹಾಸ್ಯದ ತುಣುಕಿಗೆ ಗೊಳ್ಳೆಂದು ನಗುತ್ತಿದ್ದ. ಹಠಾತ್ತನೆ ಹೂಡಿದ ನಗುವು ಹಠಾತ್ತಾಗಿ ನಿಂತೂ ಹೋಗ್ತಿತ್ತು. ಎಷ್ಟು ಸಭ್ಯವಂತ ಹುಡುಗ! ಹಣೆ ಮೇಲಿನ ಬೆವರನ್ನ ಅಪ್ಪ ಹೇಳೋ ತನಕ ವರಿಸಿಕೊಳ್ಳುತ್ತಿರಲಿಲ್ಲ. ಪಿತೃವಾಕ್ಯ ಪರಿಪಾಲನೆ ಅಂದರೆ ಆ ಹುಡುಗನದೇ? ಚದುರಂಗ ಆಡೋದರಲ್ಲಿ ಫಸ್ಟ್‌ಪ್ರೈಸ್ ಬಂತಲ್ಲಾ, ತಂದು ತೋರಿಸು ಎಂದರು ಅಪ್ಪ. ಪುಣು ಪುಣು ಅಂತ ಬೆಕ್ಕಿನ ಮರಿ ಹಾಗೆ ಮಹಡೀಗೆ ಹತ್ತಿ ಹೋಗಿ, ಗಂಧದ ಮರದ ಚದುರಂಗದ ಸೆಟ್ಟನ್ನು ತಂದು

ನಮ್ಮೆದುರಿಗೆ ಭಯ ಭಕ್ತಿಯಿಂದ ಇರಿಸಿದ. ನಯ ವಿನಯದಿಂದ ನಿಂತುಕೊಂಡ.

ಇನಾಂದಾರ್ರ್ರೆನೋ ಹೇಳಿದರು. "ಇನ್ನೂರು ಎಕರೆ ಜಮೀನಿದೆ. ಎರಡು ಟ್ರಾಕ್ಟರ್ ತರಿಸೀದೀನಿ. ಮೂರು ಭಾವಿ ತೋಡಿಸಿದೀನಿ. ಪಂಪ್ ಹಾಕಿಸಿದ್ದೀನಿ. ಇರೋನೊಬ್ಬ ಮಗ. ಸುಖವಾಗಿ ಇವೆಲ್ಲವನ್ನೂ ಸೈಂಟಿಫಿಕ್ ಆಗಿ ನಡೆಸಿಕೊಳ್ಳಿ. ಅಥವಾ ವಿಲಾಯ್ತಿಗೆ ಮುಂದೆ ಓದಬೇಕೂಂತ ಹೋಗ್ತೀನಿ ಅಂದರೆ ಹೋಗಲಿ. ಬೆಳೆವ ಹುಡುಗ. ತೋಚಿದ್ದು ಮಾಡಲಿ. ಏನಂತಿ ಮರೀ!" ಎಂದು.

"ನೀವು ಹೇಳಿದ ಹಾಗೆ ಅಪ್ಪ" ಅಂದ ಮರಿ. ತಲೆಯೆತ್ತಿ ನೋಡಿದೆ. ಜಾತಕ ಇಸುಕೊಂಡು ಬಂದೆವು. ಏನಂತೀ ಅಂದ ರಾಮು ಮನೆಗೆ ಬಂದಮೇಲೆ.

ನೋಡು! ರಾಮು. ಇನಾಂದಾರ್ರ್ರು ಬಲು ರೋಫಿನ ಆಸಾಮಿ. ಹುಲಿ ಅಂಥಾ ಮನುಷ್ಯ. ಕಾಡಿನಲ್ಲಿ ಬಿಟ್ಟರೂ ಭರ್ಜರಿಯಾಗಿ ಬಾಳೋ ಜಾತಿ. ಆದರೆ ಮರಿ ಇದೆಯಲ್ಲ ಅದೇನೋ ಬೆಕ್ಕಿನ ತರಹ ಕಾಣಿಸ್ತಾನೆ. ನಮ್ಮನೇಲಿ ಮಧ್ಯಾಹ್ನ ಗಡವ ಬೆಕ್ಕು ಮರೀನ ಕಚ್ಚಿಕೊಂಡು ಹೋಗಿ ತಿಂದುಬಿಡ್ತು. ಬಾಳಿನಲ್ಲಿ ಮನುಷ್ಯ ತನ್ನ ಮನಸ್ಸಿನಿಂದ, ಕಾಡು ಮೃಗಗಳ ಹಿರಿಮೆಯನ್ನೆಲ್ಲಾ ಮೀರಿಸಿದ್ದಾನೆ. ಆ ಮನಸ್ಸು ಬೆಳೆಯ ಬೇಕಾದರೆ ಅವನಿಗೆ ಅವಕಾಶ ದೊರಕಲೇಬೇಕು. ಮಗನ ಮನಸ್ಸು ಬೆಳೆಯಲು ಇನಾಂದಾರ್ರು ಅವಕಾಶ ಮಾಡಿಕೊಟ್ಟ ಹಾಗೆ ಕಾಣಿಸುಲ್ಲ. ಅವನು ಎಂದೆಂದಿಗೂ ಮಗುವೇ ಆಗಿರ್ತಾನೆ. ತನ್ನ ಕಾಲ ಮೇಲೆ ನಿಲ್ಲೋ ತರಹ ಕಾಣಿಸುಲ್ಲ ಕಾಡಿನಲ್ಲಿ ಬೆಕ್ಕು ಮರೀನ ತಿಂದ ಹಾಗೆ, ಊರಿನಲ್ಲಿ ಹುಲಿ ತರಹ ಇರುವವರು, ಮಗನ ಮನಸ್ಸನ್ನೇ ತಿಂದುಬಿಡ್ತಾರೆ.

ನನ್ನ ಕೇಳಿದರೆ ಇನ್ನೆಲ್ಲಾದರೂ ಗಂಡು ನೋಡೋದು ಒಳ್ಳೇದು ಅಂದೆ.

"ಸ್ಸರ್ರೀ! ಇವರ ಮಾತು ಕೇಳಿ! ಕೆಟ್ಟ ಕೆಟ್ಟ ಪುಸ್ತಕ ಓದಿಬಿಟ್ಟು ಪಟ್ಟಾಗಿ ಅವರೆಕಾಯಿ ಹುಳಿ ಹೊಡೆದುಬಿಟ್ಟು ವೇದಾಂತ ಹೇಳ್ತಾರೆ. ತಲೆ ಕೆಟ್ಟಿರೋ ಇವರು ಉಳಿದೋರಿಗೆ ಬುದ್ಧಿಬೇರೆ ಹೇಳ್ತಾರೆ. ಸುಮ್ಮಗೆ ಮದುವೆ ಮಾಡಿ, ಇನಾಂದಾರ್ರು ಒಪ್ಪಿದರೆ ಇನಾಂದಾರ್ರ್ರೇನು ತಲೆಮೇಲೆ ಗೂಟ ಹೊಡ ಕೊಂಡು ಇರ್ತಾರೆಯೇ. ಅಥವಾ ಹೆಂಡತಿ ಬಂದ ಮೇಲೆ ಮಗ ಅಪ್ಪನ ಮಾತನ್ನೇ ಕೇಳಿಕೊಂಡಿರ್ತಾನೆಯೇ? ಪುಸ್ತಕ ಓದಿದ್ದರೆ ಬಂತೇ ಭಾಗ್ಯ! ಹೊರಗಿನ ಕಣ್ತೆರೆದು ನೋಡಿದರೆ ಕಾಣಿಸುತ್ತ್ಯೇ ಎಲ್ಲಾನೂ—ಬೇಗ ಮದುವೆಗೆ ಅಣಿಮಾಡಿಕೊಳ್ಳಿ—ನಾನೂ ಇನಾಂದಾರ್ರ ಹೆಂಡತೀಗೆ ಹೇಳ್ತೀನಿ" ಎಂದಳು ಈಕೆ.

* * * *

—"ಓಲಗ ಕೇಳ್ತಾ ನಾನು ಕೂತಿದ್ದೆ. ಮದುವೆ ಮನೇಲಿ ನನ್ನಾಕೇದೇ ಎರಡೂಕಡೆ ಓಡಾಟ."

ಗಾಂಪರ ಗುಂಪು

" ಭೂತಳದಲ್ಲಿ ಬೇತಾಳ "

ಭಾವಸಮಾಧಿಯಲ್ಲಿದ್ದ ಬುದ್ಧಾಗಳ ಗುರುಗಳಂತೆ ಗಾಂಪರೊಡೆಯರು ಅರೆಗಣ್ಣು ಮುಚ್ಚಿ ಆರಾಮು ಸೋಫಾದಲ್ಲಿ ವಿರಾಮ ಪಡೆಯುತ್ತಿದ್ದರು. ಶಿಷ್ಯ ಮಂಡಲಿ ಗರಬಡಿದ ಗುಗ್ಗೂಗಳಂತೆ ಹೋಟಲಿಗೆ ಹೋಗಿ ಬರುವವರನ್ನ ನೋಡುತ್ತಿದ್ದರು. ಗುರುಗಳ ಆಜ್ಞೆಯಂತೆ ಮಡೆಯ-ಮುಠ್ಠಾಳರು ದೊರಸಾನಿಗಾಗಿ ಹೊರ ಬಾಗಿಲಲ್ಲಿ ನಿಂತಿದ್ದರು-ಸ್ವಾಗತಿಸಲು ಕಾರಿನಿಂದ ಇಳಿದು ಬಂದ ದೊರೆಸಾನಿ ಮಡೆಯನ ಹೆಗಲ ಮೇಲೆ ಗುದ್ದಿ-

" ವ್ಹೇರ್ ಈಸ್ ಮೈ ಯುಲ್‌ಬ್ರನ್ನರ್ "-ಎಂದಳು. ಸೊಗಸಾಗಿದ್ದ ಹಲ್ಲು ಸಾಲುಗಳು ಆಕೆಗೆ ಇನ್ನಷ್ಟು ಶೋಭೆ ತಂದಿತ್ತು.

" Good morning Madam .. ಗುರುಗಳು ನಿಮಗಾಗೇ ಕಾಯಿಂಗ್ ಆನ್-ಸೋಫ "

—ಎಂದು ಓಡಿದ ಮಡೆಯ ಗುರುಗಳಿಗೆ ದೊರಸಾನಿಯ ಆಗಮನದ ವಿಚಾರ ಹೇಳಲು

" ಬಂದಾಳೋ ಚಂದ್ರಮುಖೀ ..." ಎಂದು ಬೈಲಾಟ ನಾಟಕದ ಸೂತ್ರಧಾರಿ ಅರ್ಥಾತ್ ಸಾರಥಿ ಸಾವೇರಿ ರಾಗದಲ್ಲಿ, ತಾಳ ಮದ್ದಳೆ ಸಮೇತ ಪಂಚಮದ ಅಪಶ್ರುತಿಯಲ್ಲಿ ಕಿರುಚುವಂತೆ ಮನಸ್ಸಾಯಿತು ಗುರುಗಳಿಗೆ. ಇರಲಿ ಪರಂತು ಅರೀದ ದೇಶದಲ್ಲಿ ಹೇಗೆ ಅಸಡ್ಡಾಳು ಅಪಶ್ರುತಿಯ ಅತಿರೇಕ ಬೇಡವೆಂದು ಕೊಂಡು ಸುಮ್ಮನಿದ್ದರು. ನಿಜಕ್ಕೂ "ದೊರೆಸಾನಿ" ಬಿಳಿ ಮದಗಜವದನೆಯಂತೆ ವಾಲಾಡುತ್ತಾ ಲೌಂಜಿನಲ್ಲಿ ಕಾಲಿಡುತ್ತಲೆ ಗುರುಗಳಿಗೆ ಕೇಕೆ ಹಾಕುವ ಹುಮ್ಮಸ್ಸೆ ಆಯಿತು.

"ಹಲ್ಲೋ ಮೈಡಿಯರ್....ರಾತ್ರಿ ನಿದ್ದೆ ಬಂತೆ? ಊಟ ಸೇರಿತೆ ಮುಂಜಾನೆಫಳಾರ ಮಾಡಿದಿರಾ" ಎಂದು ಕೇಳಿದಳು ಎಲ್ಲಕ್ಕೂ ಎಸ್ ಎಸ್ ಎಂದು ತಲೆ ಆಡಿದರು.

" ಡಿಯರ್ ದೊರ್ಸಾನೀ....ನಾವು ಈಗ ಇಂಡಿಯಾ ಹೈ ಕಮೀಷನರ ಆಫೀಸಿಗೆ ಹೋಗಬೇಕಾಗಿದೆ ..."

" ಅಲ್ಲೇನು ಕೆಲಸ ಯಾರನ್ನಾದರೂ ನೋಡಬೇಕಿತ್ತೇನು ? "

" ಹೌದು ವಿಜಯಲಕ್ಷ್ಮಿ ಪಂಡಿತರನ್ನು ಭೆಟ್ಟಿ ಆಗಬೇಕಿತ್ತು "-ಎಂದರು ಗಾಂಪರೊಡೆಯರು

" ಗುರುಗಳೇ ಮಡ್ಡಿಗೆ ಮೂರು ದಿನದಿಂದ ಒಂದು ನಮೂನಿ ಶೀತ ಬಡಿದಿದೆ-ಖಂಡಿತ ಆ ಪಂಡಿತರ ಕೈಲಿ ಅವನಿಗೆ ಒಂದೆರೆಡು ಮಾತ್ರೆ ಕೊಡಿಸಬೇಕು "-ಮೂರ್ಖ ಮಡೆಯ ಈ ವಿಚಾರ ಹೇಳಿದ್ದ.

" ಲೋ ಮಡೆಯ ಅವರು ಚೂರ್ಣ-ಭಸ್ಮ-ಗುಟಿಕ-ಲೇಹ್ಯಾದಿಗಳ ಪಂಡಿತರಲ್ಲ ಪಂಡಿತರು ರಾಜಕೀಯ ಪಂಡಿತರು....ವಿಪರೀತ ಬುದ್ಧಿ ನಿಂದು.

"ವೆಲ್ ಮೈಡಿಯರ್ ಯುಲ್‌ಬ್ರೆನ್ನರ್-ವಿಜಯಕ್ಷ್ಮಿಪಂಡಿತರು ನಿಮಗೆಗೊತ್ತೆ?"

" ಓಹೋ ಅವರು ಯಾರಿಗೆ ಗೊತ್ತಿಲ್ಲ!! ಅವರಿಗೆ ನಾವು ಯಾರೂನ್ನೋದು ಗೊತ್ತಿಲ್ವೆ ಹೊರ್ತು ಅವರು ನಮಗೆ ಗೊತ್ತು "

" ಹೌದು ಅವ್ವನೋರೇ 50% ಒಪ್ಪಿದ್ದ ವರದ ತರಹವೇ ಇದು....ಹಹ್ಹ ಹ ನಮ್ಮ ಗರುಗುಳು ಬಲು ನಕಲಿ ಬಲು ನಕಲಿ...."

" ಹೌದು ಹೌದು ನೀನೂ ಬಲು ನಕಲಿ ಶಿಷ್ಯನೇ....ಸರ್ಕಸ್ಸಿನ ನಕಲಿ ಆಗ ಬೇಕಿತ್ತು ಮಠಕ್ಕೆ ಬಂದು ಸಾರಿದ್ದೀಯ ದಂಡ ಪಿಂಡಕ್ಕೆ....ಏಳು ಮೇಲೆ ನಡಿ ಹೊರಡೋಣ. ಅಂಥಾಗೇ ದೊರೆಸಾನೀ ನೀವು ಹೇಗೆ ಇಲ್ಲಿಗೆ ಬಂದಿರಿ?"

" ಕಾರಲ್ಲಿ ಬಂದೆ ನನ್ನ ಕಸಿನ್ನು ಈ ದಾರಿಯಲ್ಲೇ ಅವನ ಕೆಲಸಕ್ಕೆ ಹೋಗೋ ವವನಿದ್ದ-ಹಾಗೇ ನನ್ನೂ ಇಲ್ಲಿ ಒಗೆದು ಹೋದ-ನಡೀರಿ ಹೊರಡೋಣ ..."

ಇಡೀ ನಾಷಿನಲ್ ಹೋಟೆಲೇ ಈ ಗುರು ಶಿಷ್ಯರನ್ನು ಡಂಗು ಬಡಿದು ನೋಡುತ್ತಿದ್ದಂತೆಯೇ ಮುಂದೆ ದೊರೆಸಾನಿ ಪಕ್ಕದಲ್ಲಿ ಗುರುಗಳು ಹಿಂದೆ ಶಿಷ್ಯ ಮಂಡಲಿ ನಡೆದಿದ್ದು-ಚಾತುರ್ಮಾಸಕ್ಕೆ ಕೂಡಲು ಹೊರಟ ಯತಿಗಳಂತೆ ಶೋಭಿಸಿದರು.

ಮುಂಜಾನೆ ಬಹು ಪ್ರಶಾಂತವಾಗಿತ್ತು-ಅದೂ ದೊರೆಸಾನಿ ಜೊತೆ ಹೊರಟಾಗ ಬಹು ಪಸಂದ್ ಆಗೇ ಇತ್ತು-ಫುಟ್‌ಪಾತಿನ ಮೇಲೆ ಎದುರಿಗೆ ನೀಟಾದ ಕಪ್ಪು ನೀಲಿಯ ಷರ್ಟ್‌ಕಾಲರ್ ಸೂಟು, ಕೈಗೆ ಬಿಳಿ ಕೈಚೀಲ-ತಲೆಗೆ ವಿಶಿಷ್ಟವಾದ ತನ್ನದೇ ರೂಪಿನ ಹ್ಯಾಟು ಧರಿಸಿದ ಆರೂ-ಕಾಲು ಅಡಿಯ ವ್ಯಕ್ತಿ, 'ಠಪ್ ಠಪ್' ಎಂದು ಬೂಟನ್ನು ನೆಲಕ್ಕೆ ಬಡಿದು ಗಂಭೀರವಾಗಿ ಬರುತ್ತಿತ್ತು

"ಗುಡ್‌ಮಾರ್ನಿಂಗ್ ಬಾಬಿ-"-ಎಂದಳು ದೊರೆಸಾನಿ. ಮಾತೇ ಆಡದೆ ತಲೆ ಆಡಿಸಿ ಗುಡ್‌ಮಾರ್ನಿಂಗ್ ಅನ್ನು ಮೌನವಾಗೇ ಹಿಂದಿರುಗಿಸಿ ಮುಂದೆ ನಡೆದ ಆ ಬಾಬಿ.

" ಈತನಾರು ಪ್ರಿಯ ರಮಣೀ...." ಗುರು ಉವಾಚ

" ಈತನೇ 'ಲಂಡನ್ ಪೋಲೀಸ್' ಎಂದು ವಿಶ್ವಾದ್ಯಂತ ಖ್ಯಾತಿ ಪಡೆದಿರುವ ಪಡೆಯ ಒಬ್ಬ ಸದಸ್ಯ"

" ಓಹೋ ಇವರೇಯೇ ಇಲ್ಲಿನ ಪೋಲೀಸರು ...ಗುರುಗಳೇ ಇಂಥಾ ಒಳ್ಳೇ ಸರ್ಜ್ ಯೂನಿಫಾರಂ ಕೊಟ್ಟಿದ್ದಾರಲ್ಲಾ....ಪಾಪ ನಮ್ಮೂರಿನ ದಫೇದಾರ್ ದೇರಣ್ಣೋರು ಇನ್ನೂ ಚಡ್ಡಿ ಜಗತ್ತಿನಲ್ಲೇ ಇದ್ದಾರೆ ಅವರಿಗೆ ಇಲ್ಲೀ ಪೋಲೀಸ್ ಪಡೆಗಾರೂ ಅರ್ಜಿ ಗುಜರಾಯಿಸಿ-ಅಂತ ಹೇಳಬೇಕು-ಸಾಯೋತನಕ ಹರಕು ಕಾಟನ್ ಇಜಾರದಲ್ಲೇ ಕಾಲಾ ಹಾಕುವ ಬದಲು ಸರ್ಜ್ ಬಟ್ಟೇಲಾದರೂ ಸಾಯಬಹುದು ಇಲ್ಲಿ....ಅವರ ಪತ್ನಿ ಸಾವಂತ್ರಮ್ಮನವರು ಈ ಪಿರಂಗಿ ದೇಶದ ಲಂಗ ಹಾಕಿಕೊಂಡು ಬಂದರೆ ಈ ಇಂಗ್ಲೆಂಡಿನ ಹೆಂಗಸರಿಗಿಂತ ನೂರುಪಾಲು ಸುಂದರ ಕಾಣಸ್ತಾರೆ-ಅವರಿಗೊಂದು ಕಾಗದಾ ಬರೀಲೆ ಗುರುಗಳೇ?..."

" ನಿನ್ನ ಮುಂಡಾಮೋಚ್ತು ದಫೆದಾರ್ ದೇರಣ್ಣೋರು ಇಲ್ಲಿಗೆ ಬಂದರೆ ಅವರಿಗೆ ಪಕೋಡ ಒದಗಿಸೋಕೆ ಗುಂಡಪ್ಪನ ಹೋಟ್ಲನ್ನೂ ಲಂಡನ್ನಿಗೇ ವರ್ಗಾಯಿಸಬೇಕಾದೀತು....ಹಾಯಾಗಿದ್ದಾರೆ ಅಲ್ಲೇ ಸಾಯಲಿ ಬಿಡು...."

ಕೈಯಲ್ಲಿ ಕೈ ತೂರಿಸಿಕೊಂಡ ಗಂಡು ಹೆಣ್ಣುಗಳು-ಹಗಲನ್ನು ಬಳಸಿದ ಪ್ರಿಯ ಪ್ರಿಯೆಯರು-ಮಾಟಾದ ಮುದ್ದಾದ ಮಕ್ಕಳ ಗುಂಪು ದಾಟಿ 'ರಸೆಲ್

ಸ್ಕ್ವಯರ್ ಅಂಡರ್‌ಗ್ರೌಂಡ್ ರೈಲ್ವೇಸ್ಟೇಷನ್' ಎಂದು ಬೋರ್ಡಿದ್ದ ಬಳಿ ಬಂದರು. ಓ ಹೊ ಹೊ-ಅದೇನು ಕಾರುಗಳು ವ್ಯಾನುಗಳು-ಭರ್ ಭರ್ ಎಂದು ಹೋಗುತ್ತಲೆ ಇದ್ದುವು.

ಮುಂದೊಂದು ಹ್ಯಾಟನ್ನು ಇಟ್ಟು ಪಿಟೀಲೊಂದನ್ನು ನುಡಿಸುತ್ತಾ ಸರ್ಜ ಸೂಟಿನ ಪರಂಗಿ ಭಿಕ್ಷುಕನೊಬ್ಬ ಸ್ಟೇಷನ್ ಮುಂದೆ ನಿಂತಿದ್ದ. ಪಿಟೀಲಿನಲ್ಲಿ ತಲ್ಲೀನನಾಗಿದ್ದ-ಹ್ಯಾಟಿನಲ್ಲಿ ಪೆನ್ನಿಗಳು ಬಿದ್ದಿದ್ದವು. "ಗುರುಗಳೇ ಇಂಗ್ಲೆಂಡಿನಲ್ಲಿ ಭಿಕ್ಷುಕರೇ ಇಲ್ಲ ಅಂತ ತಾವು ಹೇಳಿದ್ದು ನೆನಪು....ಇವನೇನು ಇಲ್ಲಿ ಮಾಡುತ್ತಿರುವುದು?"

"ಇವ ಬೆಗ್ಗರ್ ಆದರೂ-ಅವನ ಮುಖದಲ್ಲಿನ ವರ್ಚಸ್ಸು ನೋಡೋ-ನೀಟಾದ ಗಡ್ಡ ನೋಡು-ಮಾಟಾದ ಆಕಾರ ನೋಡು ..ಇಂಗ್ಲೀಷನೋರು ಏನು ಮಾಡಿದರೂ ಹೈಕ್ಲಾಸ್ ಮಾಡ್ತಾರೆ ಸಾರ್-ಎಕ್‌ದಂ ಹೈಕ್ಲಾಸ್ ಬೆಗ್ಗರ್ ಇದ್ದಾನಲ್ಲಾ ಈತಾ"-ಎಂದು ಆ ದೇಶದಲ್ಲಿದ್ದುದನ್ನೆಲ್ಲಾ ಮೆಚ್ಚುವ ಮನಸ್ಸಿನ ಮಡೆಯ ಆ ಪಿಟೀಲು ಭಿಕ್ಷುಕನನ್ನು ಮೆಚ್ಚಿಕೊಂಡ.

"ಸುಮ್ನಿರಲೇ ಬೆಗ್ಗರ್ ಇಲ್ಲಿರೋ ಕಸಾ ಎಲ್ಲಾ ನಿನ್ನ ಕಣ್ಣಿಗೆ ರಸವಾಗೇ ಕಾಣ್ತಾದೆ ಕಣೊ" ಕವಕ್ಕನೆ ಎಗರಲಾಡಿದ ಮಂಕ.

—ಪಿಟೀಲು ನುಡಿಸುತ್ತಿದ್ದ ಆ ಬೆಗ್ಗರನು" ಧಟಕ್ ಪಿಟೀಲನ್ನು ಬಗಲಿಗೆ ತುರುಕಿ ಮುಂದಿದ್ದ ಹ್ಯಾಟನ್ನು ಗಬಕ್ಕನೆ ಎತ್ತಿಕೊಂಡು ಬದಿಯ ಗಲ್ಲಿ ಬಿದ್ದು ಕ್ಷಣಾರ್ಧದಲ್ಲಿ ಮಾಯವಾದ ಇದೇಕೆ ಹೀಗೆ ಎಂದು ಗಾಂಪರ ಗುಂಪು ಚಕಿತವಾಯಿತು ದೊರೆಸಾನಿ ನವಿರಾಗಿ ನಕ್ಕು-"ನೋಡಿದಿರಾ ಅಲ್ಲಿ ಒರುತ್ತಿರುವ 'ಬಾಬಿ' ಅದೇ ಲಂಡನ್ ಪೋಲೀಸಪ್ಪನ್ನ ನೋಡಿ-ಅವನ ದರ್ಶನ ಈ ಬೆಗ್ಗರರಿಗೆ ಸಿಂಹಸ್ವಪ್ನ ಅವನ ಕೈಗೆ ಸಿಕ್ಕಿಬಿದ್ದರೆ-ಅವನಿಗೊಂದು ಉದ್ಯೋಗ ಹೊಂದಿಸಿಕೊಡುವ ಕಚೇರಿಗೆ ಅಟ್ಟಿಬಿಡುವನು. ಈ ಸೋಮಾರಿಗಳಿಗೆ ಸುಲಭವಾಗಿ ಭಿಕ್ಷೆ ದೊರಕುವಾಗ ಕಷ್ಟಪಡಲು ಮನಸ್ಸಾಗುತ್ತದೆಯೆ? ...ಅದಕ್ಕೆ ಓಟಾಕಿತ್ತ ಆ ಬೆಗ್ಗರು"-ಎಂದಳು.

—ರೈಲು ಹತ್ತುವ ಮುಂಚೆ ಬಿಸಿಬಿಸಿಯಾಗಿ ಕಾಫಿ ಕುಡಿಯುವ ಮನಸ್ಸಾದದ್ದು ಬದಿಯೇ ಇದ್ದ-ಎಸ್‌ಪ್ರೆಸೆಲ್ಲಾ ಕಾಫಿಹೌಸ್ ಎಂಬ ಬೋರ್ಡು ನೋಡಿದಾಗಲೇ "ಕಾಫಿ ಕುಡಿದು ಹೊರಡುವ" ಎಂದು ಸ್ವಯಂ ಗುರುಗಳೇ ಸೂಚಿಸಿದರು. ದೊರಸಾನಿಯನ್ನು ಮುಂದೆ ಮಾಡಿಕೊಂಡು ಒಳ ಹೊಕ್ಕರು ನಮ್ಮ ಕಾಕಾ ಹೋಟಲುಗಳಲ್ಲಿ ಮುಂದೆಯೇ ಚಹಾ ಕಾಸಿ ಸೋಸಿ ಕೊಡೊ ಬಾಯಿಲರ್ ಇಟ್ಟಿರೊಲ್ಲವೆ? ಅದೇ ಜಾತಿಯ ಚಿಕ್ಕ ಹೋಟ್ಲು ಇದು. ಆದರೆ ಎಲ್ಲಾ ಸ್ಟೀಟು ಥಳಥಳಿಸುತ್ತಿದ್ದ ಬಾಯಿಲರು-ಅಂದವಾದ ಲೋಟಾ ಬಟ್ಟಲು-ಬಣ್ಣ ಬಣ್ಣದ ಬಿಸ್ಕತ್ತು ಬನ್ನುಗಳು-ಕ್ಷಣದಲ್ಲಿಯೇ ಹಣ್ಣಿನ ರಸ ತೆಗೆದು ಸಜ್ಜ ಮಾಡುವ ಗಾಜಿನ ಫಲರಸೋತ್ಪಾದನ ಯಂತ್ರ-ಇವೆಲ್ಲವನ್ನೂ' ಮೀರಿಸುವುದೆಂದರೆ ಕೌಂಟರಿನ ಆ ಕಡೆ ನಿಂತಿದ್ದ ಸುಂದರಿಯರು!!!-ಅವರು ಇಂಗ್ಲೀಷರಲ್ಲ-ಜಗತ್ತನ್ನೇ ತನ್ನ ಮೋಹಾಕೃತಿಯಿಂದ ಬೆಬ್ಬರಗು ಮಾಡಿರುವ ಗಿನಾ ಲಲ್ಲೋಬ್ರಿಗಿಡಗಳ ದೇಶವಾದ ಇಟಲಿ ದೇಶದವರು. ಕೇಳಬೇಕೆ ಅವರಲ್ಲಿ ರೋಮನರ ರಕ್ತವಿದೆಯಂತೆ-ಬಿಳಿಚಿಕೊಂಡ ಇಂಗ್ಲೀಷರ ಬಣ್ಣವಲ್ಲದ ಗುಲಾಬಿ ಮಿಶ್ರಿತ ಮಿಂಚುದಂತದ ಮುಖಕಾಂತಿಯ ಸುರಸುಂದರಿಯರು ಆ ತರುಣಿಯರು.

" ಲಲ್ಲೊಬ್ರಿಗಿಡಳ ಊರವರು ಕೇಳಬೇಕೆ ? "–ಎಂದು ದೊರಸಾನಿಯೇ ಈ ಗಾಂಪರ-ಗುಂಪು ಆ ಕಾಫಿ ಹೌಸಿನ ಪರಿಚಾರಿಕೆಯರ ಮುಗುಳು ನಗಾಹ್ವಾನಕ್ಕೆ ಅಪುರೂಪಕ್ಕೆ ಮಸಾಲೆದೋಸೆ ಕಂಡವರಂತೆ ಆಡಿದ್ದು ನೋಡಿ ಹೇಳಿದಳು

ಆಹಾ ದಾಳಿಂಬ್ರಿ ಗಿಡವೆ ! .. ಹೌದು ಅವರದಂತ ಪಂಗ್ತಿ ಧಾಳಿಂಬ್ರಿ ಬೀಜ ದಿಂದಲೇ ಮಾಡಿದ್ದು "–ಮರುಳ ಆವಂಕಿ ವ್ಯೆಯ್ಯ ಉಬ್ಬಿ ಇಳಿತಗಳಲ್ಲಿ ಗುರು ಶಿಷ್ಯರು ತಲ್ಲೀನರಾಗಿ, ಆ ಪ್ರಾಣಿ ಏನು ಕೊಡಲಿ ಎಂದಾಗ ನಿನ್ನನ್ನೇ ತಿನ್ನಬಹುದೆ? ಎಂದೆನ್ನುವ ಮನಸ್ಸಾಯಿತಂತೆ.

" ಯುಲ್‌ಬ್ರಿನ್ನರನೇ ಕಾಫಿ ತಾನೆ ? "–ಎಂದು ದೊರಸಾನಿ ಕೇಳಿದಳು ತಲೆ ಹಾಕಿ ಅಲ್ಲಿದ್ದ ಕೋಡುಬಳೆಯಂತೆ ಇದ್ದ ತಿಂಡಿಯನ್ನೂ ನೋಡಿದರು ತಿಂದು ನೋಡಿದರು ಇಟಲಿಯವರು ಇಡ್ಲಿಯನ್ನು ಹೀಗೆ ಮಾಡಿರಬಹುದೆ ? ಎಂದು ಶಂಕಿಸಿದರು ಏಕೆಂದರೆ ಅದು ನೋಡಲಿಕ್ಕೆ ಕೋಡುಬಳೆ ಹಾಗಿದ್ದರೂ ತಿಂದಾಗ ಉಪ್ಪಿಲ್ಲದ ಇಡ್ಲಿಗೆ ಸಕ್ಕರೆ ಸವರಿದಂತಿತ್ತು. ಕಾಫಿ ಕುಡಿದರು ಕಾಫಿಗೆ ನಾಲ್ಕು ಪೆನ್ನಿ ಆ ಕೋಡುಬಳೆಗೆ ಮೂರು ಪೆನ್ನಿ-ಕಾಫಿ ಸುಮಾರಾಗಿತ್ತು. ಆದರೂ ಬಡಿಸಿದ ಆ ಹೆಂಗೆಳೆಯರನ್ನು ಬಿಟ್ಟು ಬರಲಾರದ ಮನಸ್ಸಿಂದ ಹೊರವಂಟರು ನ್ಯಾಷನಲ್ ಹೋಟಲಿನ ಹತ್ತಿರವೇ ಈ ಚೆಲುವ ಕಾಫಿ ಬೀಡು ಇರುವುದರಿಂದ ಬೇಕಾದಾಗ ಬರ ಬಹುದೆಂದು ಮರುಳ ಮಂಕರು ಅಂದುಕೊಂಡರು. " ಬನ್ನಿ ಬನ್ನಿ " ಎಂದು ರಸ್ತೆಯ ಬದಿಗೇ ಇದ್ದ ರೈಲ್ವೆ ಸ್ಟೇಷನ್ನಿಗೆ ಹೋದರು.

" ಇದು ರೈಲ್ವೇ ಸ್ಟೇಷನ್ನೇ "

" ಹೌದು ..."

" ಮತ್ತೆ ಕಲ್ಲಿದ್ದಲು ಹೊಗೆಯೆಲ್ಲಿ-ಜಟಕಾ ಸ್ಟ್ಯಾಂಡಿನಲ್ಲಿ ಸಾಲಾಗಿ ಕುಳಿತ ಕೂಲಿಯವರೆಲ್ಲಿ-ಕಂಬಿ ಎಲ್ಲಿ ? ರೈಲೆಲ್ಲಿ ? ಕೈಮರವೆಲ್ಲಿ- ಗುರುಗಳು ಮೆಟ್ಟಲಿಳಿ ಯುತ್ತಾ ಕೇಳಿದರು. ಟಿಕೆಟಿಗಾಗಿ ಜನ ಕ್ಯೂ ನಿಂತಿದ್ದರು. ಮಾಮೂಲಿಯ ಸಿನಿಮಾ ಟಿಕೆಟ್ಟಿಗೆ ನುಗ್ಗಿದ ಅಭ್ಯಾಸದ ಮಡೆಯ ಮಡ್ಡಿಯರು ಒಮ್ಮೆಲೇ ಹಾರಿ ಕಿಟಕಿಯ ಬಳಿ ನುಗ್ಗುವುದನ್ನು ದೊರೆಸಾನಿ ತಡೆದು ನಿಲ್ಲಿಸಿದಳು

" ಎಲ್ಲಿಗೀಗ ನಾವು ಹೋಗಬೇಕಾದ್ದು ? "

" ಇಂಡಿಯಾ ಹೈ ಕಮೀಷನರ ಆಫೀಸಿಗೆ "

" ಮೊದಲು Strandಗೆ ಹೋಗೋಣ ಅಲ್ಲಿಂದ ಹಾಗೇ ಊರು ನೋಡುತ್ತಾ ನಡೆದೇ ಇಂಡಿಯಾ ಆಫೀಸಿಗೆ ಹೋಗಬಹುದು "

ಎಂದೆನ್ನುತ್ತಾ ಸಾಲಾಗಿ ನಿಂತ ಕೆಂಪು ಲೆಟರ್ ಬಾಕ್ಸಿನಂತಹ ಡಬ್ಬಗಳ ಬಳಿ ನಡೆದಳು.

" ಇವು ನೋಡಿ-ಆಟೋಮ್ಯಾಟಿಕ್ ಟಿಕೆಟ್ ಮಿಷೀನುಗಳು-ಯಾವ ಸ್ಟೇಷನ್ನಿಗೆ ಹೋಗಬೇಕೊ ಅಲ್ಲಿಗಾಗುವಷ್ಟು ದುಡ್ಡು ಇಲ್ಲಿ ಹಾಕಿದರೆ ಟಿಕೆಟ್ಟೂ ಹೆಚ್ಚು ದುಡ್ಡು ಹಾಕಿದ್ದರೆ ಬಳಿದ ಚಿಲ್ಲರೆಯೂ ಇಲ್ಲಿ ಬರುತ್ತೆ "-Strand-ಎಂದು ಬರೆದ ಡಬ್ಬಿಯಲ್ಲಿ ಗೋಲಕಕ್ಕೆ ಹಾಕುವಂತೆ ಕೆಲವು ಪೆನ್ನಿಗಳನ್ನು ಹಾಕಿದಳು ಟಿಕೇಟುಗಳು ಬಂದವು. ಎಲ್ಲರನ್ನೂ ಕರೆದುಕೊಂಡು ನೆಲಮಾಳಿಗೆಗೆ ಇಳಿಯುವ ಲಿಫ್ಟ್ ಇರುವ ಕಡೆ ಬಂದು ಅದರಲ್ಲಿ ನಿಂತರು

"ಯುಲ್‌ಬ್ರಿನ್ನರರೇ–ಹೀಗೆ ಬನ್ನಿ-ಈ ಲಿಫ್ಟಿನಲ್ಲಿ ಇಳಿದು ಕೆಳಕ್ಕೆ ಇಳಿಯಬೇಕು"

" ನಮ್ಮ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಳಗಿನಿಂದ ಹೆಣ ಮೇಲೆ ಸಾಗಿಸಲು ಲಿಫ್ಟ್ ಇದೆ-ಇಲ್ಲಿ ಮೇಲಿಂದ ಕೆಳಕ್ಕಿಳಿಯಲು ಲಿಫ್ಟ್ ಉಪಯೋಗಿಸುವುದು ಚಮತ್ಕಾ ರದ ವಿಷಯ "

"ನಿನ್ನ ತಲೆ ಮೇಲಿಂದ ಕೆಳಗೆ ಕೆಳಗಿನಿಂದ ಮೇಲೆ ಒಂದೇ ಲಿಫ್ಟು ಏರಿ ಇಳಿಯುವುದು ಮುಂಕೇ"–ಗುರುಗಳೆಂದರು

"ಅಂತೂ ಟಿಕೆಟ್ಟಿಗೆ ಬಹಳ ಶ್ಯಾಣೇತನದ ಯಂತ್ರ ಮಾಡಿದ್ದಾರೆ"-ಮರುಳ.

"ನಮ್ಮೂರು ಸ್ಟೇಷನಲ್ಲೂ ಭಾರ ತೂಕ ಮಾಡಿಕೊಳ್ಳೋಕ ಇಂಥೋದೆ ಒಂದು ಮಿಷಿನ್ನು ಇತ್ತು–ಬರೇ ಸಮಕಲು ಆಣೆ-ಫೋಟೋ ಆಣೆ ಹಾಕಿ ತೂಕ ನೋಡಿಕೊಳ್ಳುವವರ ಸಂಖ್ಯೆ ಹೆಚ್ಚಿದ್ದರಿಂದ ಅದನ್ನು ತೆಗೆದು ಹಾಕಿದರು-ಅಂಥಾದ್ದನ್ನೆ ಇಲ್ಲಿ ಟಿಕೇಟ್ಟಿಗೆ ಇಟ್ಟಿದಾರೆ ಅಷ್ಟೆ" ಎಂದು ಇದೇನು ಮಹಾ ಮಾತಾಡಿದ ಮಡ್ಡಿ.

"ಕ್ಲಿಯರ್ ಆಫ್ ದಿ ಗೇಟ್ಸ್"–ಎಂದು ಆಕಾಶವಾಣಿ ಹೇಳಿತು-ಯಾರು ಮಾತಾಡಿದ್ದು ? ಎಂದು ಅಚ್ಚರಿ ಪಡುತ್ತಿದ್ದಂತೆ ತಮ್ಮಷ್ಟಕ್ಕೆ ತಾವೇ ಲಿಫ್ಟಿನ ಬಾಗಿಲುಗಳು ಬಂದು ಅದವು. ಪಾತಾಳದಲ್ಲಿನ ಬೇತಾಳದ ಬಳಿ ಇಳಿಸುವಂತೆ ಕ್ವಂಯ್ಯ್ಯ ಕ್ವಂಯ್ಯ್ಯ ಸದ್ದಿನೊಡನೆ ಸರ ಸರನೆ ಲಿಫ್ಟು ಇಳಿಯತೊಡಗಿತು. ಭಯದಿಂದಲೋ ಎಂಬಂತೆ ಗುರುಗಳು ಗುರುಸಾನಿಯ ತೋಳು ಹಿಡಿದಿದ್ದರು–ಕ್ಷಮಿಸಿ ದೊರೆಸಾನಿಯ ತೋಳಲ್ಲಿ ತೋಳು ಹಾಕಿ ಹಿಡಿದಿದ್ದರು.

ಕ್ಷಣದಲ್ಲಿ ನೆಲಕ್ಕಿಳಿದಿತ್ತು-ಬಾಗಿಲು ತೆಗೆಯಿತು ನಿಮಿಷದಲ್ಲಿ ಅಷ್ಟೂ ಖಾಲಿ ಆಗಿತ್ತು ಗುರುಗಳೂ ಶಿಷ್ಯರೂ ದೊರೆಸಾನಿಯನ್ನು ಹಿಂಬಾಲಿಸಿದರು. ನೂರಾರು ಅಡಿ ನೆಲದಲ್ಲಿ ಸುರಂಗ ತೋಡಿ ಲಂಡನ್ನಿನ ಕೆಳಗೂ ದೊಡ್ಡ ರೈಲು ಲೈನೇ ಹಾಕಿರುವಂತಿತ್ತು.

"ಯುಲ್‌ಬ್ರಿನ್ನರನೇ-ಅಂಡರ್‌ಗ್ರೌಂಡ್ ರೈಲಿನ ನಕ್ಷೆಯೊಂದನ್ನು ಇಟ್ಟುಕೊಂಡಿರು-ಈಗ ನೋಡಿ ನಾವು ಪಿಕೆಡೆಲ್ಲಿ ಲೈನ್ ಹಿಡಿಯಬೇಕು"

"ಹಾಗಾದರೇನು ? ಒಂದೇ ಲೈನಲ್ಲವೇ ರೈಲಿಗೇ ?"

"ಈ ಲಂಡನ್ನಿನ ವಿವಿಧ ಭಾಗಗಳಿಗೆ ಬೇಗ ಸಂಪರ್ಕ ಸೌಕರ್ಯ ಒದಗಿಸಲು ಈ ನೆಲಮಾಳಿಗೆ ರೈಲುಗಳು ಲಂಡನ್ನಿನ ಉದ್ದ ಅಗಲಕ್ಕೂ ಹರಡಿವೆ-ಪಿಕೆಡೆಲ್ಲಿ ಲೈನ್, ನಾರ್ಥನ್ ಲೈನ್-ಮೆಟ್ರಪಾಲಿಟನ್ ಲೈನ್ ಡಿಸ್ಟ್ರಿಕ್ಟ್ ಲೈನ್, ಸರ್ಕಲ್ ಲೈನ್-ಸೆಂಟ್ರಲ್ ಲೈನ್, ಬೇಕರ್‌ಲೂ ಲೈನ್, ಹೀಗೆ ಹಾಸು ಹೊಕ್ಕಾಗಿ ಹಣೆದಿದೆ ರೈಲು ಮಾರ್ಗ"

"ಅದೇ ನಮ್ಮೂರ ಚಿಕ್ಕಬಳ್ಳಾಪುರ ಲೈನ್-ಮೈಸೂರ್ ಲೈನ್-ಚಿಕ್ಕಜಾಜೂರ್ ಲೈನ್-ಗಳಿಲ್ಲವೇ ಹಾಗೆ" "ಅದು ಊರಿಂದೂರಿಗೆ ಇದು ಊರಲ್ಲಿಯೇ ಈಪಾಟಿ ಲೈನುಗಳೇ"-ಮರುಳ.

"ಹೌದು ದೊಡ್ಡ ಊರೂಂದ್ರೆ-ನಮ್ಮ ಸಿಟಿ ಬಸ್ಸುಗಳು ಬೆಂಗಳೂರಲ್ಲಿ ಇಲ್ಲವೇ ಮಲ್ಲೇಶ್ವರದಿಂದ ತಾಯಪ್ಪನ ಹಳ್ಳಿವರೆಗೇ....ಹಾಗೇ"-ಮಡ್ಡಿ

ದೊರಸಾನಿ ನೆಲಮಾಳಿಗೆಯ ಪ್ಲಾಟ್‌ಫಾರಂನಲ್ಲಿ ರೈಲಿಗಾಗಿ ಕಾದಿದ್ದಳು. ಅರವತ್ತು ಮೈಲಿ ವೇಗದ ಜರಿ ಹರಿದುಬಂದಂತೆ ಭಯಂಕರ ಸದ್ದುಮಾಡುತ್ತಾ ಬಂತು ಎಲೆಕ್ಟ್ರಿಕ್ ರೈಲು. ನಿಂತಕೂಡಲೇ ಬಾಗಿಲುಗಳು ತಾವಾಗೇ ಸರಿದುಕೊಂಡವು ಹಿಂಡು ಜನ ಕ್ಷಣದಲ್ಲಿ ಇಳಿದರು-ಮತ್ತೊಂದು ಹಿಂಡು ಮತ್ತೆ ಹತ್ತಿತು-ಗುರುಗಳೂ ಶಿಷ್ಯರೂ-ದೊರೆಸಾನಿ ಹತ್ತಿದರು. ಮೆತ್ತೆಹಾಕಿದ ರೈಲು-ಗಂಡು ಹೆಣ್ಣೆಂಬ ಭೇದವಿಲ್ಲದೆ ಕೂತು ಸಾಗುವವರ ಮಧ್ಯೆ ಗಾಂಪರ ಗುಂಪು ಬೆರೆತುಹೋಯಿತು ಕ್ಷಣದಲ್ಲೇ ಬಾಗಿಲು ಹಾಕಿಕೊಂಡು ಭೋರ್ಗರೆದು ಹೊರಟೇ ಹೋಯಿತು ರೈಲು ದಂಗಾಗಿ ಕೂತಿತ್ತು ಗಾಂಪರಗುಂಪು.

—ದಾಶರಥಿ ದೀಕ್ಷಿತ್.

REG. NO. B. G. 343 KORAVANJI SEPT. 1961.

Printed by B. S. Iyengar, Bangalore City.
Publisher—B. N. Gupta. Editor—M. Sivaram.